

ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಪುಟಗಳು : 36
ರೂ. 28/–
ಕನ್ನಡ–ಇಂಗ್ಲೀಷ್ ಮಾಸಿಕ


ಬಾಪು ಪ್ರಪಂಚ

BAPU PRAPANCHA

ಸಂಪುಟ–05 • ಸಂಚಿಕೆ–07 • ಡಿಸೆಂಬರ್ 2023







ರೂ. 28/- BAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-05 • ಸಂಚಿಕೆ-07 • ಡಿಸೆಂಬರ್ 2023

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations**, Bangalore

ಪತ್ರಗಳು

ಮಾನ್ಯರೆ ,

' ಬಾಪೂ ಪ್ರಪಂಚ 'ಮಾಸಿಕ ಮುದ್ರಿತ ಪತ್ರಿಕೆಯನ್ನು ಈ ಡಿಜಿಟಲ್ ಯುಗದಲ್ಲಿ ಹೇಗೆ ಪ್ರಕಟಿಸ ಬಹುದು ಎನ್ನುವ ಬಗ್ಗೆ ಯೋಚನೆ ಮಾಡಿ. ಮುದ್ರಣ ವೆಚ್ಚ ದುಬಾರಿಯೂ ಹೌದು. ಇದೊಂದು ಸಲಹೆ.

ಮಹಾಂತೇಶ್, ಬೆಂಗಳೂರು

* * *

ಮಾನ್ಯರೆ ,

ಗಾಂಧೀಜಿಯವರ ಹಿಂದ್ ಸ್ವರಾಜ್ ಮತ್ತು ಕುವೆಂಪುರವರ ವಿಶ್ವ ಮಾನವತೆಯ ಸಪ್ತ ಸೂತ್ರಗಳು ಒಂದಕ್ಕೊಂದು ಮಿಳಿತವಾಗಿರುವುದು ಗಾಂಧಿ ಪ್ರಭಾವ ಕುವೆಂಪು ಮೇಲೆ ಆಗಿರುವುದರ ಪ್ರತೀಕ . ರವಿಚಂದ್ರ ಜಂಗಣ್ಣನವರ ಚಿಕ್ಕ ಚೊಕ್ಕ ಲೇಖನ ಚೆನ್ನಾಗಿದೆ. ಗಾಂಧೀಜಿ ಕುರಿತು ಕುವೆಂಪು ಕವಿತೆ ಭಾವಪೂರ್ಣವಾಗಿದೆ.

ಲಿಂಗಣ್ಣ, ಮಂಡ್ಯ

* * *

ಮಾನ್ಯರೆ,

ಯುವಜನರಿಗಾಗಿ ಗಾಂಧಿ ವಿಚಾರ ಸಂಕಿರಣದ ವರದಿ ತುಂಬಾ ದೀರ್ಘವಾಯಿತು . ಆದರೂ ವಿಷಯದ ದೃಷ್ಟಿಯಿಂದ ನೋಡಿದರೆ ಬೇಕಿತ್ತೇನೋ ಎಂದನ್ನಿಸಿತು. ಮಂಡ್ಯದ ಕರ್ನಾಟಕ ಸಂಘದ ಸಂಘಟನಾ ಶಕ್ತಿ ಬಗ್ಗೆ ಪ್ರಶಂಸೆ ವ್ಯಕ್ತ ಪಡಿಸುತ್ತೇನೆ.

ದಿಲೀಪ್, ಮದ್ದೂರು

* * *

ಮಾನ್ಯರೆ,

ಹುಲುಗಪ್ಪ ಕಟ್ಟೀಮನಿಯವರು ಬಿ ಆರ್ ಪೊಲೀಸ್ ಪಾಟೀಲರ ' ನಾನೆಂಬುದು ನಾನಲ್ಲ ' ನಾಟಕದ ಕೃತಿಗೆ ಬರೆದಿರುವ ಮುನ್ನುಡಿ ಗಾಂಧಿ ಚಿತ್ರವನ್ನು ಕಣ್ಣಿಗೆ ಕಟ್ಟುತ್ತದೆ. ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ನಗರದ ಸಮೀಪದಲ್ಲಿರುವ ಟಾಲ್ಸ್ ಟಾಯ್ ಆಶ್ರಮದಲ್ಲಿ ಗಾಂಧೀಜಿಯವರ ಆಳೆತ್ತರದ ಪ್ರತಿಮೆ ಸ್ಥಾಪನೆ ಚಿತ್ರ ನೋಡಿ ಸಂತಸವಾಯಿತು. ಗಾಂಧಿ ಈಗಲೂ ದಕ್ಷಿಣ ಆಫ್ರಿಕಾದ ಜನಮಾನಸದಲ್ಲಿ ಇರುವ ಸಂಗತಿ ಭಾರತೀಯರಾದ ನಮಗೆ ಹೆಮ್ಮೆ.

ಪಾಟೀಲ್, ಬೆಳಗಾವಿ



ಪ್ರಿಯರೆ,


ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು https://gandhibhavan.in ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :

ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.



ಹಿಂದ್ ಸ್ವರಾಜ್ :

ಹಿಂದೂ – ಮುಸ್ಲಿಂ ಬಗ್ಗೆ ಗಾಂಧಿ ನಿಲುವು

ಗಾಂಧೀಜಿ ಅವರು 1909 ರಲ್ಲಿ ರಚಿಸಿದ 'ಹಿಂದ್ ಸ್ವರಾಜ್' ಕಿರು ಪುಸ್ತಕ ಇಂದಿಗೂ ಪ್ರಸ್ತುತ. ಈ ಕೃತಿಯಲ್ಲಿ ಗಾಂಧೀಜಿ ಭಾರತದ ನಡೆ ನುಡಿ ಹೇಗಿರಬೇಕು ಎನ್ನುವ ಬಗ್ಗೆ ತಮ್ಮ ಸ್ಪಷ್ಟ ನೋಟವನ್ನು ನೀಡಿದ್ದಾರೆ.ಆ ಕೃತಿಯಲ್ಲಿ ಹಿಂದು – ಮುಸ್ಲಿಮರ ಬಗ್ಗೆ ಗಾಂಧೀಜಿಯ ಒಳನೋಟ ನೀಡುವ ಒಂದು ಅಧ್ಯಾಯ ಇಲ್ಲಿದೆ.


ಸಂಪಾದಕ: ನಿಮ್ಮ ಕಡೆಯ ಪ್ರಶ್ನೆ ಬಹಳ ಗಂಭೀರವಾದುದು. ಆದರೂ ವಿಚಾರ ಮಾಡಿದರೆ ಉತ್ತರ ಸುಲಭ. ರೈಲುಗಳು, ವಕೀಲರು, ವೈದ್ಯರು ಇರುವುದರಿಂದ ಈ ಪ್ರಶ್ನೆ ಹುಟ್ಟುತ್ತದೆ. ರೈಲಿನ ವಿಷಯ ಹೇಳಿದೆ. ಉಳಿದೆರಡನ್ನೂ ಆಮೇಲೆ ಚರ್ಚಿಸೋಣ. ತನ್ನ ಕೈಕಾಲು ಎಷ್ಟು ದೂರ ಒಯ್ಯಬಲ್ಲವೋ ಅದೇ ಮನುಷ್ಯನ ಓಡಾಟದ ಮಿತಿಯಾಗಬೇಕು. ನಿಸರ್ಗವೇ ಹಾಗೆ ಮಾಡಿದೆ. ಈ ರೈಲು ಮುಂತಾದ ಉನ್ನತ ವೇಗದ ವಾಹನಗಳಲ್ಲಿ ನಮ್ಮ ಓಟ, ಅಲೆದಾಟ ಅತಿಯಾಗಿರದಿದ್ದರೆ ಎಷ್ಟೋ ಗೊಂದಲ ಕಡಿಮೆಯಾಗುತ್ತಿತ್ತು. ನಮ್ಮ ಕಷ್ಟಗಳೆಲ್ಲಾ ನಾವೇ ಮಾಡಿಕೊಂಡವು. ದೇವರು ಮನುಷ್ಯನಿಗೆ ಈ ಶರೀರವನ್ನು ಕೊಟ್ಟಾಗಲೇ ಅದರ ರಚನೆಯಲ್ಲಿಯೆ ಅವನ ಓಡಾಟಕ್ಕೆ ಮಿತಿಯನ್ನು ಕಲ್ಪಿಸಿಟ್ಟಿದ್ದಾನೆ . ಅ ಮಿತಿಯನ್ನು ಮೀರುವ ಉಪಾಯಗಳನ್ನು ಹುಡುಕುತ್ತಲೇ ಇದಾನೆ ಮನುಷ್ಯ. ಸೃಷ್ಟಿಕರ್ತನನ್ನು ಅರಿತುಕೊಳ್ಳಲಿ ಎಂದು ದೇವರು ಮನುಷ್ಯನಿಗೆ ಬುದ್ಧಿಯನ್ನು ನೀಡಿದ. ಆದರೆ ಮನುಷ್ಯ ಸೃಷ್ಟಿಕರ್ತನನ್ನು ಮರೆಯಲು ಆ ಬುದ್ಧಿಯನ್ನು ಉಪಯೋಗಿಸಿದ. ನನ್ನ ನೆರೆಹೊರೆಯವರ ಸೇವೆ ಮಾಡಬಲ್ಲ ಹಾಗೆ ದೇವರು ನನ್ನನ್ನು ಸೃಜಿಸಿದಾನೆ. ಆದರೆ ನನ್ನ ಗರ್ವದಿಂದ ನಾನು ಇಡೀ ವಿಶ್ವದ ಸೇವಾ ಭಾರವನ್ನೆ ಹೊತ್ತವನಂತೆ ಆಡುತ್ತೇನೆ. ಅಸಾಧ್ಯವನ್ನು ಸಾಧಿಸುವ ಈ ಪ್ರಯತ್ನದಲ್ಲಿ ಭಿನ್ನ ಸ್ವಭಾವ, ಭಿನ್ನ ಧರ್ಮಗಳ ಸಂಪರ್ಕವಾಗಿ ಮನುಷ್ಯ ದಿಗ್ಭ್ರಮೆಗೊಳ್ಳುತ್ತಾನೆ. ಈ ವಿಚಾರ ಸರಣಿಯಿಂದ ರೈಲು ನಿಜವಾಗಿ ಹಾನಿಕರವೆಂಬುದು ಅರ್ಥ ವಾಗಿರಬೇಕು. ಅದರಿಂದಾಗಿ ಮನುಷ್ಯ ತನ್ನನ್ನು ಸೃಷ್ಟಿಸಿದ ಭಗವಂತನನ್ನೇ ಮರೆತಿದ್ದಾನೆ.

ಓದುಗ : ಇದೆಲ್ಲ ಸರಿ. ನನ್ನ ಪ್ರಶ್ನೆಗೆ ಉತ್ತರ ಕೇಳಲು ನನಗೆ ಆತುರವಾಗಿದೆ. ಮುಸಲ್ಮಾನರು ಇಲ್ಲಿಗೆ ಬಂದುದರಿಂದ ನಮ್ಮ ರಾಷ್ಟ್ರೀಯತೆಯ ಭಂಗವಾಗಲಿಲ್ಲವೇ?

ಸಂಪಾದಕ : ಬೇರೆ ಬೇರೆ ಧರ್ಮದ ಜನರು ಇದ್ದರೆ ಹಿಂದೂಸ್ಥಾನ ಒಂದು ರಾಷ್ಟವಾಗದೇ ಹೋದೀತೆ? ಬೇರೆ ದೇಶಗಳಿಂದ ಹೊಸಬರು ಬಂದರೆ ರಾಷ್ಟ್ರೀಯತೆ ನಷ್ಟವಾಗದು; ಬಂದವರು ಅವರಲ್ಲಿ ಬೆರೆತು ಹೋಗುತ್ತಾರೆ. ಆ ಸ್ಥಿತಿ ಬಂದಾಗಲೇ ಒಂದು ದೇಶ ರಾಷ್ಟ್ರವಾಗುತ್ತದೆ. ಆ ದೇಶಕ್ಕೆ ಹೊರಗಿನದನ್ನು ಜೀರ್ಣಿಸಿಕೊಳ್ಳುವ ಶಕ್ತಿ ಬೇಕು. ಹಿಂದೂಸ್ಥಾನ ಯಾವಾಗಲೂ ಹೀಗೆಯೇ ಇದೆ. ನಿಜವಾಗಿ, ಎಷ್ಟು ಜನ ಮನುಷ್ಯರೋ ಅಷ್ಟು ಧರ್ಮ. ಆದರೆ ರಾಷ್ಟ್ರೀಯತೆಯ ಭಾವನೆಯುಳ್ಳವರು ಪರಸ್ಪರ ಧರ್ಮದಲ್ಲಿ ಕೈಹಾಕರು. ಹಾಗಲ್ಲದಿದ್ದರೆ ಅವರು ಒಂದು ರಾಷ್ಟ್ರವಾಗಲು ಅರ್ಹರಲ್ಲ. ಹಿಂದೂಸ್ಥಾನದಲ್ಲಿ ಬರೀ ಹಿಂದೂಗಳೇ ಇರಬೇಕು ಎಂದು ಯೋಚಿಸುವ ಹಿಂದೂಗಳು ಕನಸು ಕಾಣುತ್ತಿದ್ದಾರೆ. ಈ ದೇಶವನ್ನು ತಮ್ಮದಾಗಿ ಮಾಡಿಕೊಂಡ ಹಿಂದೂ, ಮುಸಲ್ಮಾನ, ಈಸಾಯಿ ಎಲ್ಲರೂ ದೇಶಭ್ರಾತೃಗಳು. ತಮ್ಮ ಹಿತಕ್ಕಾಗಿಯಾದರೂ ಅವರು ಐಕಮತ್ಯದಿಂದ ಬಾಳಬೇಕು. ಒಂದೇ ಧರ್ಮವಿದ್ದರೇನೇ ಒಂದು ರಾಷ್ಟ್ರ ಎಂಬುದು ಲೋಕದಲ್ಲಿ ಎಲ್ಲಿಯೂ ಇಲ್ಲ. ಹಿಂದೂಸ್ಥಾನದಲ್ಲಿಯಂತೂ ಎಂದೂ ಹಾಗೆ ತಿಳಿದಿಲ್ಲ.

ಓದುಗ: ಆದರೆ ಹಿಂದೂ ಮುಸಲ್ಮಾನರಲ್ಲಿರುವ ಜನ್ಮವೈರಕ್ಕೆ ಏನು ಹೇಳುತ್ತೀರಿ?

ಸಂಪಾದಕ: "ಜನ್ಮವೈರ' ಎಂಬ ಶಬ್ದವನ್ನು ಹುಟ್ಟಿಸಿದವರು ನಮಿಬ್ಬರ ಶತ್ರುಗಳು. ಹಿಂದೂಗಳು ಮುಸಲ್ಮಾನರು



ಹೊಡೆದಾಡಿದಾಗ ಹಾಗೆ ಮಾತಾಡಿಕೊಂಡರು. ಅವರು ಹೊಡೆದಾಡುವುದನ್ನು ಬಿಟ್ಟು ಎಷ್ಟೋ ದಿನವಾಯಿತು. ಈಗಿನ್ನೇನು ಜನ್ಮವೈರ ? ಬ್ರಿಟಿಷರು ಬಂದು ನೆಲೆಸಿದ ಮೇಲೆಯೇ ನಮ್ಮ ಹೊಡೆದಾಟ ನಿಲ್ಲಲಿಲ್ಲ; ನೆನಪಿರಲಿ, ಮುಸ್ಲಿಮ್ ಸಾಮ್ರಾಟರ ಕೆಳಗೆ ಹಿಂದೂಗಳೂ, ಹಿಂದೂ ಚಕ್ರವರ್ತಿಗಳ ಕೆಳಗೆ ಮುಸಲ್ಮಾನರೂ ಏಳಿಗೆಯಾದರು. ಪರಸ್ಪರ ಕಲಹ ಆತ್ಮಘಾತಕವೆಂಬುದನ್ನು ಎರಡೂ ಪಕ್ಷದವರು ಅರಿತುಕೊಂಡರು. ಯುದ್ಧಕ್ಕೆ ಅಂಜಿ ಯಾರೂ ತಮ್ಮ ಧರ್ಮವನ್ನು ಬಿಡರು ಎಂಬುದನ್ನು ತಿಳಿದುಕೊಂಡರು. ಆದುದರಿಂದ ಇಬ್ಬರೂ ಕಲೆತು ಮಲೆತು ಶಾಂತಿಯಿಂದಿರಲು ನಿರ್ಧರಿಸಿದರು. ಇಂಗ್ಲಿಷರು ಬಂದರೋ ಇಲ್ಲವೋ ಈ ಜಗಳಗಳು ಮತ್ತೇ ಚಿಗುರಿದವು.

ನೀವು ಹೇಳುವ ಗಾದೆಗಳೆಲ್ಲ ಆ ಯುದ್ಧಗಳಲ್ಲಿ ಹುಟ್ಟಿದಂಥವು. ಅವನ್ನು ಈಗ ಹೇಳುವುದು ನಿಸ್ಸಂದೇಹವಾಗಿ ಹಾನಿಕಾರಕ. ಹಿಂದೂ ಮುಸಲ್ಮಾನರಲ್ಲಿ ಅನೇಕರಿಗೆ ಒಬ್ಬನೇ ಮೂಲಪುರುಷ, ಇಬ್ಬರೂ ಒಂದೇ ವಂಶದವರು, ಇಬ್ಬರೊಳಗೂ ಒಂದೇ ರಕ್ತ ಹರಿಯುತ್ತಿದೆ ಎಂಬುದನ್ನು ನಾವು ನೆನೆಯ ಬೇಡವೆ? ತಮ್ಮ ಧರ್ಮವನ್ನು ಬದಲಿಸಿದ ಮಾತ್ರಕ್ಕೆ ಜನ ವೈರಿಗಳಾಗುತ್ತಾರೆಯೇ? ಹಿಂದೂಗಳ ದೇವರು ಬೇರೆ, ಮುಸಲ್ಮಾನರ ದೇವರು ಬೇರೆಯೆ? ಬೇರೆ ಬೇರೆ ಧರ್ಮಗಳು ಬೇರೆ ಬೇರೆ ದಾರಿ; ಹೋಗುವುದು ಒಂದೇ ಕಡೆಗೆ. ಹೋಗುವುದು ಒಂದೇ ಕಡೆಗೆ ಎಂದ ಮೇಲೆ ಯಾವ ದಾರಿ ನಡೆದರೇನು? ಏಕೆ ಈ ಜಗಳ?


ಶೈವ–ವೈಷ್ಣವರಲ್ಲಿ ಎಂಥ ಘೋರವಾದ ಗಾದೆಗಳಿವೆ. ಗೊತ್ತೆ? ಆದರೂ ಇವರಿಬ್ಬರೂ ಬೇರೆ ಬೇರೆ ರಾಷ್ಟ್ರ ಎಂದು ಯಾರೂ ಹೇಳರು. ವೈದಿಕ ಧರ್ಮಕ್ಕೂ ಜೈನಮತಕ್ಕೂ ಬಹಳ ಅಂತರವಂತೆ. ಅದರಿಂದ ಜೈನರೂ ಸನಾತನಿಗಳೂ ಬೇರೆ ಬೇರೆ ರಾಷ್ಟ್ರಗಳಾದರೆ? ನಿಜವಾದ ಅಂಶ ಇಷ್ಟು; ನಾವೆಲ್ಲರೂ ಗುಲಾಮರಾಗಿದ್ದೇವೆ, ಅದರಿಂದ ನಮ್ಮ ನಮ್ಮೊಳಗೇ ಕಾದಾಡುತ್ತೇವೆ. ಮೂರನೆಯವರ ಬಳಿಗೆ ತೀರ್ಪಿಗಾಗಿ ಹೋಗುತ್ತೇವೆ. ಮುಸ್ಲಿಂ ವಿಗ್ರಹ ಭೇದಕರಿದ್ದಂತೆ ಹಿಂದೂಗಳು ಇದಾರೆ. ನಮ್ಮೊಳಗೆ ಜ್ಞಾನ ಹೆಚ್ಚಾದಂತೆಲ್ಲ ಬೇರೆ ಧರ್ಮಗಳನ್ನು ಅನುಸರಿಸುವವರೊಡನೆ ನಾವು ಕಾದಾಡಬೇಕಾಗಿಲ್ಲವೆಂಬುದು ನಮಗೆ ತಿಳಿಯುತ್ತದೆ.

ಓದುಗ: ಗೋರಕ್ಷಣೆಯ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ ಕೇಳೋಣ.

ಸಂಪಾದಕ; ನಾನು ಸ್ವಯಂ ಗೋಪೂಜಕ. ಎಂದರೆ ಹಸುವನ್ನು ಆದರಿಸುತ್ತೇನೆ. ಹಿಂದೂಸ್ಥಾನ ಕೃಷಿ ಪ್ರಧಾನ ದೇಶ, ಹಿಂದೂಸ್ಥಾನದ ರಕ್ಷಣೆಗೆ ಗೋವೇ ಆಧಾರ. ಗೋವು ನಮಗೆ ನೂರಾರು ಬಗೆಯಲ್ಲಿ ಉಪಕಾರಿ, ಮುಸಲ್ಮಾನ ಸೋದರರೂ ಇದನ್ನು ಒಪ್ಪಬೇಕು. ಆದರೆ, ಗೋಪೂಜೆ ಮಾಡುವಂತೆಯೆ ನಾನು ಮನುಷ್ಯರನ್ನೂ ಗೌರವಿಸುತ್ತೇನೆ.

ಹಿಂದೂವೋ, ಮುಸಲ್ಮಾನರೋ; ಮನುಷ್ಯನೂ ಗೋವಿನಂತೆ ಉಪಕಾರಿ. ಹೀಗಿರುವಾಗ, ಒಂದು ಹಸುವನ್ನು ಕಾಪಾಡಲು ಒಬ್ಬ ಮುಸಲ್ಮಾನನನ್ನು ನಾನು ಕೊಲ್ಲಲೆ? ಹಾಗೆ ಮಾಡಿದರೆ, ನಾನು ಮುಸಲ್ಮಾನರಿಗೂ ವೈರಿಯಾದೆ, ಗೋವಿಗೂ ಘಾತಕನಾದೆ. ಆದುದರಿಂದ ನನಗೆ ತಿಳಿದ ಮಟ್ಟಿಗೆ ಗೋರಕ್ಷಣೆಗೆ ಒಂದೇ ದಾರಿ: ದೇಶದ ಹಿತಕ್ಕಾಗಿ ಗೋವನ್ನು ರಕ್ಷಿಸುವ ಕೆಲಸದಲ್ಲಿ ನೀನೂ ನನಗೆ ಜೊತೆಯಾಗು ಎಂದು ಮುಸಲ್ಮಾನ ಸೋದರನಿಗೆ ತಿಳಿಸಿ ಹೇಳುವುದು. ಅವನು ನನ್ನ ಮಾತನ್ನು ಕೇಳದಿದ್ದರೆ, ಈ ಕೆಲಸ ನನ್ನ ಶಕ್ತಿಗೆ ಮೀರಿದುದು ಎಂದು ಆ ಹಸುವನ್ನು ಕೈಬಿಡಬೇಕು. ಗೋವಿನ ಬಗ್ಗೆ ನನ್ನ ಅಂತಃಕರಣ ಅತ್ಯಂತ ದಯಾಪೂರ್ಣವಾಗಿದ್ದರೆ, ಅದನ್ನು ರಕ್ಷಿಸಲು ನನ್ನ ಪ್ರಾಣವನ್ನೆ ತೆರಬೇಕೇ ವಿನಾ ಮುಸಲ್ಮಾನ ಸೋದರರ ಪ್ರಾಣವನ್ನು ತೆಗೆಯಲಾಗದು. ಇದೆ ನಮ್ಮ ಧರ್ಮ ಎಂದು ನಾ ತಿಳಿದಿದ್ದೇನೆ,

'ಹೌದು' ಮತ್ತು 'ಅಲ್ಲ' ಗಳಿಗೆ ಯಾವಾಗಲೂ ಹಾಗೆಯೇ. ಮನುಷ್ಯ ಹಟವಾದಿಯಾದರೆ ಕಷ್ಟ . ನಾನೊಂದು ಹಟ ಹಿಡಿದರೆ ಮುಸಲ್ಮಾನ ಸೋದರ ಇನ್ನೊಂದಕ್ಕೆ ಹಟ ಹಿಡಿಯುತ್ತಾನೆ. ನಾನು ವಕ್ರವಾಗಿ ನಡೆದರೆ ಅವನೂ ವಕ್ರವಾಗಿಯೇ ನಡೆಯುತ್ತಾನೆ .ನಾನು ಸ್ವಲ್ಪ ತಲೆಬಾಗಿದರೆ ಅವನೂ ಪೂರಾ ತಲೆಬಾಗಿ ನಡೆದಾನು . ಒಂದು ವೇಳೆ ಅವನು ತಲೆ ಬಾಗದಿದ್ದರೂ ನಾನು ತಲೆಬಾಗಿದುದೇನು ತಪ್ಪಾಗುವುದಿಲ್ಲ. ಹಿಂದೂಗಳು ಹಟ ಹಿಡಿದ ಮೇಲೆ ಗೋಹತ್ಯೆ ಹೆಚ್ಚಿತು. ಈ ಗೋರಕ್ಷಣಾ ಸಂಘಗಳನ್ನು ಗೋಹತ್ಯಾ ಸಂಘಗಳೆಂದೇ



ಹೇಳಬಹುದು. ಇಂಥಾ ಸಂಘಗಳಿರುವುದೇ ನಮಗೆ ಅವಮಾನ. ನಾವು ಗೋರಕ್ಷಣೆ ಮಾಡುವುದನ್ನು ಮರೆತಾಗಲೇ ಇಂಥ ಸಂಘಗಳು ಅಗತ್ಯವಾದುವೇನೋ!

ನನ್ನ ಸಹೋದರನೊಬ್ಬ ಗೋಹತ್ಯೆ ಮಾಡಲು ಸಿದ್ಧನಾದರೆ ನಾನೇನು ಮಾಡಬೇಕು? ಅವನನ್ನು ಕೊಂದು ಹಾಕಲೋ ? ಅವನ ಕಾಲಿಗೆ ಬಿದ್ದು ಗೋವನ್ನು ಕೊಲ್ಲಬೇಡ ಎಂದು ಬೇಡಿಕೊಳ್ಳಲೋ? ಬೇಡಿಕೊಳ್ಳುವುದೇ ಸರಿ ಎಂದರೆ, ಮುಸಲ್ಮಾನ ಸೋದರನನ್ನೂ ಬೇಡಿಕೊಳ್ಳಬೇಕಲ್ಲವೆ?

ಹಿಂದೂಗಳೇ ಗೋವನ್ನು ನಿಷ್ಕರುಣೆಯಿಂದ ಪೀಡಿಸುತ್ತಾರಲ್ಲ. ಆಗ ಅದನ್ನು ರಕ್ಷಿಸುವವರು ಯಾರು? ಗೋ ಸಂತಾನವನ್ನು ನಿರ್ದಯೆಯಿಂದ ದೊಣ್ಣೆಯಿಂದ ಹೊಡೆಯುತ್ತಾರಲ್ಲ. ಆವಾಗ ಅವರಿಗೆ ಹಾಗೆ ಮಾಡಬೇಡಿ ಎಂದು ತಿಳಿಸಿ ಹೇಳುವವರು ಯಾರು? ಆದರೂ ನಾವು ಒಂದು ರಾಷ್ಟ್ರವಾಗಿರಲು ಇದು ಅಡ್ಡಿ ಬಂದಿಲ್ಲ. ಈ ಕಡೆಗೆ, ಹಿಂದೂಗಳು ಅಹಿಂಸಕರು, ಮುಸಲ್ಮಾನರು ಅಹಿಂಸಕರಲ್ಲ ಎಂದರೆ ಅಹಿಂಸಕನ ಧರ್ಮವೇನು? ಅಹಿಂಸಾವಾದಿಯಾದವನು ಯಾರನ್ನಾದರೂ ಕೊಲ್ಲಬಹುದು ಎಂದೇನು ಬರೆದಿಲ್ಲ. ಅವರ ದಾರಿ ನೇರಾಗಿದೆ. ಒಂದು ಜೀವವನ್ನು ಉಳಿಸಲು ಇನ್ನೊಂದು ಜೀವವನ್ನು ಅಳಿಸಲಾರ. ನಮ್ರವಾಗಿ ಪ್ರಾರ್ಥಿಸಬಲ್ಲ– ಅದೇ ಅವನ ಕರ್ತವ್ಯ, ಪುರುಷಾರ್ಥ.

ಆದರೆ ಪ್ರತಿಯೊಬ್ಬ ಹಿಂದೂವೂ ಅಹಿಂಸಕನೇ? ನಿಜವಾಗಿ ನೋಡಿದರೆ. ಅಹಿಂಸಕರು ಯಾರೂ ಇಲ್ಲ; ನಾವು ಜೀವಹಿಂಸೆ ಮಾಡುತ್ತಲೇ ಇದೇವೆ. ಯಾವ ಬಗೆಯ ಜೀವಹಿಂಸೆಯನ್ನೂ ಮಾಡದಂತೆ ವಿಮೋಚನೆ ಪಡೆಯಲು ನಾವು ಬಯಸುತ್ತೇವೆ ಎಂದು ನಾವು ಅಹಿಂಸಾವಾದಿಗಳು . ಸಾಧಾರಣವಾಗಿ

ಹಿಂದೂಗಳಲ್ಲಿ ಬಹಳ ಜನ ಮಾಂಸಾಹಾರಿಗಳು. ಆದುದರಿಂದ ಅವರು ಒಟ್ಟಿಗೆ ಇರಲಾರರು ಎನ್ನುವುದು ಶುದ್ಧ ಅಸಂಗತ. ಸ್ವಾರ್ಥಿಗಳೂ ಮೋಸಗಾರರೂ ಆದ ಮತೋಪದೇಶಕರು ಈ ವಿಚಾರ ಗಳನ್ನೆಲ್ಲ ನಮ್ಮ ಮನಸ್ಸಿನಲ್ಲಿ ತುರುಕಿದ್ದಾರೆ. ಇಂಗ್ಲಿಷರು ಅದನ್ನು ಪೂರ್ಣಗೊಳಿಸಿದರು. ಅವರಿಗೆ ಇತಿಹಾಸ ಬರೆವ ರೂಢಿಯಿದೆ. ಎಲ್ಲಾ ಜಾತಿಗಳ ರೂಢಿ– ಸಂಪ್ರದಾಯಗಳನ್ನು ಅಧ್ಯಯನ ಮಾಡುವ ಸೋಗು ಹಾಕುತ್ತಾರೆ ಅವರು.

ದೇವರು ನಮಗೆ ಮಿತವಾದ ಬುದ್ಧಿಶಕ್ತಿಯನ್ನು ಕೊಟ್ಟಿದಾನೆ. ಅವರು ತಾವೇ ದೇವರು ಎಂದು ಮನಬಂದಂತೆ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ತಮ್ಮ ಸಂಶೋಧನೆಗಳ ಬಗ್ಗೆ ಬಡಾಯಿ ಕೊಚ್ಚಿ, ಅದರ ಮೋಹಜಾಲದಲ್ಲಿ ನಮ್ಮನ್ನು ನೂಕುತ್ತಾರೆ. ಅಜ್ಞಾನ ವಶದಿಂದ ನಾವು ಅವರ ಕಾಲಿಗೆ ಬಿದ್ದು ಅದನ್ನೆಲ್ಲ ನಂಬುತ್ತೇವೆ.

ತಪ್ಪು ತಿಳಿವಳಿಕೆ ಬೇಡ ಎನ್ನುವವರು ಕುರಾನನ್ನೆ ಓದಲಿ. ಅದರಲ್ಲಿ ಹಿಂದುಗಳಿಗೆ ಸಮ್ಮತವಾಗುವಂಥ ನೂರಾರು ಮಾತು ಸಿಗುತ್ತವೆ. ಭಗವದ್ಗೀತೆಯಲ್ಲಿರುವ ವಾಕ್ಯಗಳಿಗೆ ಮುಸಲ್ಮಾನನೂ ವಿರೋಧ ಮಾಡಲಾರ. ಕುರಾನಿನಲ್ಲಿ ನನಗೆ ಅರ್ಥವಾಗದವು, ಇಷ್ಟವಿಲ್ಲದವು ಕೆಲವು ವಾಕ್ಯಗಳಿವೆ. ಅದಕ್ಕಾಗಿ ಮುಸಲ್ಮಾನರನ್ನು ನಾನು ತಿರಸ್ಕರಿಸಲೆ? ಎರಡು ಕೈ ಸೇರಿ ಚಪ್ಪಾಳೆ, ಇಬ್ಬರು ಕಲೆತು ಜಗಳ. ನನಗೆ ಜಗಳ ಬೇಡ ಎಂದರೆ ಮುಸಲ್ಮಾನ ಏನು ಮಾಡಬಲ್ಲ?

ಹಾಗೆಯೆ, ಮುಸಲ್ಮಾನ ನನ್ನೊಡನೆ ಜಗಳವಾಡಲು ಸಿದ್ಧನಾಗಿಲ್ಲದಿದ್ದರೆ ನಾನೇನು ಮಾಡಬಲ್ಲೆ? ಗಾಳಿಯನ್ನು ಗುದ್ದಿದರೆ ಮೈ ನೋವು ಅಲ್ಲವೆ? ಪ್ರತಿಯೊಬ್ಬನೂ ತನ್ನ ತನ್ನ ಧರ್ಮದ ತಿರುಳನ್ನು ಅರಿತು ಅದರಂತೆ ನಡೆದರೆ, ಕಪಟಿ ಮತೋಪದೇಶಕರು ಹೇಳಿದಂತೆ ಕೇಳದಿದ್ದರೆ, ಜಗಳಕ್ಕೆ ಅವಕಾಶವೇ ಇರದು.

ಓದುಗ: ಆದರೆ ಇಂಗ್ಲಿಷರು ಈ ಎರಡೂ ಜಾತಿಗಳನ್ನು ಒಟ್ಟಾಗಲು ಬಿಟ್ಟಾರೆಯೇ?

ಸಂಪಾದಕ : ಈ ಪ್ರಶ್ನೆ ಅಂಜಿಕೆಯ ಲಕ್ಷಣ. ನಮ್ಮ ಸಂಕುಚಿತ ಗುಣ ಇದರಿಂದ ತಿಳಿಯುತ್ತದೆ. ಇಬ್ಬರು ಅಣ್ಣತಮ್ಮಂದಿರು ಅನ್ಯೋನ್ಯವಾಗಿರಲು ಬಯಸಿದರೆ ಮೂರನೆಯವರು ಯಾರು ಅವರನ್ನು ಬೇರೆ ಬೇರೆ ಮಾಡಬಲ್ಲರು?


ಇತರರ ದುಷ್ಟ ಸಲಹೆಗಳಿಗೆ ಅವರು ಕಿವಿಗೊಟ್ಟರೆ ಅವರು ಮೂರ್ಖರೆನ್ನಬೇಕು . ಅದೇ ರೀತಿ ಇಂಗ್ಲಿಷರ ಮಾತು ಕೇಳಿ ನಾವು ಹೋಳಾದರೆ – ನಾವು, ಹಿಂದೂಗಳು ಮುಸ್ಲಿಮರು–ನಮ್ಮನ್ನೇ ನಿಂದಿಸಿಕೊಳ್ಳಬೇಕು; ಅವರನ್ನೇಕೆ ಬೈಯಬೇಕು. ಹಸಿಗಡಿಗೆ ಒಂದಕ್ಕಲ್ಲ ಮತ್ತೊಂದಕ್ಕೆ ತಗಲಿ ಒಡೆದು ಹೋಗುತ್ತದೆ. ಯಾವುದಕ್ಕೂ ತಗಲದಂತೆ ಗಡಿಗೆಯನ್ನು ದೂರ ಇಡುವುದಲ್ಲ ಉಪಾಯ; ಒಡೆಯದಂತೆ ಗಡಿಗೆಯನ್ನು ಸುಡುವುದು. ಆದುದರಿಂದ ನಮ್ಮ ಹೃದಯಗಳನ್ನು ಹಾಗೆ ಪಕ್ವಗೊಳಿಸಬೇಕು.

ಆಗ ನಮಗೆ ಯಾವ ಭಯವೂ ಇಲ್ಲ. ಹಿಂದೂಗಳು ಇದನ್ನು ಸುಲಭವಾಗಿ ಮಾಡಬಲ್ಲರು. ಅವರ ಸಂಖ್ಯೆ ಹೆಚ್ಚು ತಾವು ಹೆಚ್ಚು ಸುಶಿಕ್ಷಿತರೆಂಬ ಹೆಮ್ಮೆಯೂ ಅವರಿಗಿದೆ. ಮುಸಲ್ಮಾನರೊಡನೆ ತಾವು ಸ್ನೇಹವಾಗಿದ್ದರೆ, ಅದಕ್ಕೆ ಯಾವ ಆಘಾತ ಬಂದರೂ ತಡೆದುಕೊಳ್ಳಬಲ್ಲ ಶಕ್ತಿ ಅವರಿಗಿದೆ.

ಈಗ ಎರಡೂ ಜಾತಿಗಳಲ್ಲಿ ಪರಸ್ಪರ ಅವಿಶ್ವಾಸವಿದೆ. ಅದರಿಂದ ಮುಸಲ್ಮಾನರು ತಮಗೆ ಕೆಲವು ವಿಶೇಷ ರಿಯಾಯಿತಿ ಬೇಕೆಂದು ಲಾರ್ಡ್ ಮಾರ್ಲೆಯನ್ನು ಕೇಳುತ್ತಿದ್ದಾರೆ. ಇದನ್ನು ಹಿಂದೂಗಳೇಕೆ ವಿರೋಧಿಸಬೇಕು? ಹಿಂದೂಗಳು ವಿರೋಧಿಸದಿದ್ದರೆ ಇಂಗ್ಲಿಷರು ಅದನ್ನು ಗಮನಿಸಿಯಾರು, ಮುಸಲ್ಮಾನರು ಕ್ರಮೇಣ ಹಿಂದೂಗಳಲ್ಲಿ ವಿಶ್ವಾಸ ಇಟ್ಟಾರು ; ಕಡೆಗೆ ಸೋದರಭಾವ ಹುಟ್ಟೀತು. ನಮ್ಮ

ಜಗಳಗಳನ್ನು ಇಂಗ್ಲಿಷರ ಬಳಿಗೊಯ್ಯಲು ನಮಗೆ ನಾಚಿಕೆಯಾಗಬೇಕು. ವಿರೋಧ ಮಾಡದಿದ್ದರೆ ಹಿಂದೂಗಳಿಗೇನೂ ನಷ್ಟವಲ್ಲ ಎಂಬುದು ಎಲ್ಲರಿಗೂ ತಿಳಿಯುವಂತಿದೆ. ಇನ್ನೊಬ್ಬನಿಗೆ ತನ್ನಲ್ಲಿ ವಿಶ್ವಾಸ ಹುಟ್ಟುವಂತೆ ಮಾಡಿದವರಿಗೆ ಯಾರಿಗೂ ಎಂದಿಗೂ ಎಳ್ಳಷ್ಟೂ ನಷ್ಟವಲ್ಲ.

ಹಿಂದೂಗಳು ಮುಸಲ್ಮಾನರು ಎಂದಿಗೂ ಜಗಳವಾಡರು ಎನ್ನುತ್ತಿಲ್ಲ ನಾನು. ಒಟ್ಟಿಗಿರುವ ಅಣ್ಣತಮ್ಮಂದಿರೂ ಸಹ ಜಗಳವಾಡುತ್ತಾರೆ. ಒಮ್ಮೊಮ್ಮೆ ತಾಳ್ಮೆ ಒಡೆದು ಹೋಗುವುದೂ ಉಂಟು. ಹೀಗೆ ಆಗಬೇಕಾದುದಿಲ್ಲ. ಆದರೆ ಎಲ್ಲರಿಗೂ ಒಂದೇ ರೀತಿ ಮತಿಯಿಲ್ಲ. ಸಿಟ್ಟು ಬಂದಾಗ ಮನುಷ್ಯ ಎಷ್ಟೋ ಮೂರ್ಖತನ ಮಾಡುತ್ತಾನೆ. ಅದನ್ನು ನಾವು ಸೈರಿಸಬೇಕು. ಒಂದು ವೇಳೆ ಜಗಳವಾಡಿದರೂ, ಅದಕ್ಕಾಗಿ ವಕೀಲರನ್ನಿಟ್ಟು ಇಂಗ್ಲಿಷರ ಕೋರ್ಟುಗಳಿಗೆ ಹೋಗಬಾರದು. ಇಬ್ಬರು ಜಗಳವಾಡಿದರು; ಇಬ್ಬರ ತಲೆಯೂ ಒಡೆಯಿತು ಅಥವಾ ಒಬ್ಬನದೇ. ಅವರ ನಡುವೆ ಮೂರನೆಯವನೇನು ನ್ಯಾಯದಾನ ಮಾಡುವುದು? ಹೊಡೆದಾಡಿದವರು ಗಾಯಗೊಂಡರು. ಇದರಲ್ಲಿ ನ್ಯಾಯದ್ದೇನು ಮಾತು ಬಂತು. ■





ಗಾಂಧಿವಾದಿ ನಾಸ್ತಿಕ ಗೋರಾ

~ಬರಗೂರು ರಾಮಚಂದ್ರಪ್ಪ

ನನಗೆ 'ಗೋರಾ' ಅವರ ವಿಚಾರಧಾರೆ ತುಂಬಾ ವಿಶಿಷ್ಟ ಎನ್ನಿಸಲು ಕಾರಣ– ಅವರು ನಾಸ್ತಿಕವಾದಕ್ಕೆ ಕೊಟ್ಟ ವ್ಯಾಪಕ ಹೊಸ ನೋಟ. ನಾಸ್ತಿಕರೆಂದರೆ ದೇವರಿಲ್ಲ ಎನ್ನುವವರು ಮತ್ತು ಆಸ್ತಿಕರೆಂದರೆ ದೇವರಿದ್ದಾನೆ ಎನ್ನುವವರು ಎಂಬ ಒಂದೇ ಸಾಲಿನ ವಿವರಣೆ ಚಾಲ್ತಿಯಲ್ಲಿರುವ ಸಂದರ್ಭದಲ್ಲಿ ಗೋರಾ ವಿಚಾರಧಾರೆ ನನಗೆ ಮುಖ್ಯವೆನಿಸುತ್ತದೆ. ನಾಸ್ತಿಕತೆ ಮತ್ತು ಆಸ್ತಿಕತೆಗಳ ಕೇಂದ್ರ ಬಿಂದು ದೇವರ ಅಸ್ತಿತ್ವವನ್ನು ಕುರಿತದ್ದ◌ೀ ಆಗಿದ್ದರೂ ಅದರಾಚೆಗೆ ಕೊಂಡೊಯ್ಯುವ ವೈಚಾರಿಕ ವ್ಯಾಪ್ತಿಯನ್ನು ಗೋರಾ ಅವರ ಚಿಂತನೆ ಮತ್ತು ವ್ಯಕ್ತಿತ್ವದಲ್ಲಿ ಕಾಣಬಹುದಾಗಿದೆ. ಯಾಕೆಂದರೆ, ಅವರಿಗೆ ದೇವರ ಅಸ್ತಿತ್ವವನ್ನು ಅಲ್ಲಗಳೆಯುವುದಷ್ಟ◌ೀ ಅಂತಿಮ ಗುರಿಯಾಗಿರಲಿಲ್ಲ. ದೇವರ ನಿರಾಕರಣೆಯನ್ನು ಸಾಮಾಜಿಕ ಸುಧಾರಣೆಯ ವ್ಯಾಪ್ತಿಗೆ ತಂದು ಹೊಸ ಆಯಾಮ ಕೊಟ್ಟ ಆದರ್ಶ ವಾದಿಯಾಗಿದ್ದರು ಅವರು.

ಗೋಪರಾಜು ರಾಮಚಂದ್ರರಾವ್ (ಗೋರಾ) ಅವರು ಹುಟ್ಟಿದ್ದು 1902ರ ನವೆಂಬರ್ 15 ರಂದು. ಅಂದಿನ ಮದ್ರಾಸ್ ಪ್ರಾಂತ್ಯದಲ್ಲಿದ್ದ ಇಂದಿನ ಒರಿಸ್ಸಾದ ಛತ್ರಪುರ ಎಂಬ ಹಳ್ಳಿಯಲ್ಲಿ ಹುಟ್ಟಿದ ಗೋರಾ ಅವರ ಪ್ರಮುಖ ಕಾರ್ಯಕ್ಷ◌ೇತ್ರವೆಂದರೆ ಅವಿಭಜಿತ ಆಂಧ್ರಪ್ರದೇಶ. ಮೊದಲಿಂದಲೂ ತನ್ನೊಳಗೆ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತ ಉತ್ತರಿಸಿಕೊಳ್ಳುತ್ತ ಬೆಳೆದ ಇವರ ಬದುಕು ಅನೇಕ ಸ್ಥಿತ್ಯಂತರ ಹಾಗೂ ಸವಾಲುಗಳ ಬಯಲು. ಇವರಿಗೆ ಧರ್ಮ ಕುರಿತ ಪ್ರಶ್ನೆಗಳು ಎದ್ದದ್ದು ಕ್ರ◌ೈಸ್ತ ಮತಾಂತರದ ಆಮಿಷ ಎದುರಾದಾಗ. ಕ್ರ◌ೈಸ್ತ ಧರ್ಮಕ್ಕೆ ಮತಾಂತರ ಹೊಂದಿದರೆ ಅಮೆರಿಕದ ಒಂದು ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ವಿಭಾಗದ ಮುಖ್ಯಸ್ಥನ ಹುದ್ದೆ ನೀಡುವ ಆಮಿಷವೊಡ್ಡಿದಾಗ ಗೋರಾ ನಿರಾಕರಿಸಿದರು. ಆಗ ಇವರಲ್ಲಿ ಎದ್ದ ಪ್ರಶ್ನೆಗಳು ಹಲವಾರು. ಧರ್ಮ ಎಂದರೆ ಏನು? ಹಿಂದೂ ಧರ್ಮ, ಕ್ರ◌ೈಸ್ತ ಧರ್ಮಗಳನ್ನು ಹೇಗೆ ವಿವರಿಸಿಕೊಳ್ಳುವುದು? ಹೀಗೆ ಕಾಡಿದ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಿರುವಾಗ ಮನುಷ್ಯರಲ್ಲ◌ೇ ಇರುವ ಅಸಮಾನತೆಯ ಕರಾಳತೆ ಕಾಣಿಸಿಕೊಳ್ಳತೊಡಗಿತು. ಇದೇ ಸಂದರ್ಭದಲ್ಲಿ (1928) ತಂದೆ ಯಜ್ಞೊ◌ೀಪವಿ◌ೀತ ಕಾರ್ಯಕ್ರಮವಿಟ್ಟುಕೊಂಡಾಗ ಗೋರಾ ಜನಿವಾರ ಧರಿಸಲು ನಿರಾಕರಿಸಿದರು. ತಂದೆ ಇವರನ್ನು ಮನೆಯಿಂದ ಹೊರಗಟ್ಟಿದರು. ಆನಂತರ ಗೋರಾ ಎದುರಿಗೆ ಬದುಕಿನ ಬಯಲು.

ಜಗತ್ತಿನಲ್ಲಿಯೇ ಮೊದಲ ನಾಸ್ತಿಕ ಕೇಂದ್ರವನ್ನು ಸ್ಥಾಪಿಸಿದ ಕೀರ್ತಿ ಗೋರಾ ಅವರಿಗೆ ಸಲ್ಲುತ್ತದೆ. ಕೃಷ್ಣ ಜಿಲ್ಲೆಯ ಮಚಲಿಪಟ್ಟಣದಲ್ಲಿ ಸ್ಥಾಪಿತವಾದ ನಾಸ್ತಿಕ ಕೇಂದ್ರದಿಂದ ಮೊದಲ ಅಂತಾರಾಷ್ಟ್ರೀಯ ನಾಸ್ತಿಕವಾದಿ ಸಮ್ಮ◌ೀಳನ ನಡೆಸಿದ ದಾಖಲೆಯೂ ಗೋರಾ ಅವರ ಹೆಸರಿನಲ್ಲಿದೆ. ಗೋರಾ ಅವರು ತಮ್ಮ ಪತ್ನಿ ಸರಸ್ವತಿಯವರ ಜತೆಗೂಡಿ ಕೈಗೊಂಡ ಸಾಮಾಜಿಕ ಸುಧಾರಣೆಯ ಕ್ರಿಯೆಗಳು ನಾಸ್ತಿಕ ಕೇಂದ್ರವು ಕೇವಲ ದೇವರ ನಿರಾಕರಣೆಗೆ ಸೀಮಿತವಾದದ್ದಲ್ಲ

ಎಂಬುದನ್ನು ಸ್ಥಿರೀಕರಿಸಿದವು. ಇದರರ್ಥ ಗೋರಾ ದಂಪತಿ, ದೇವರ ಅಸ್ತಿತ್ವದ ಪರವಾಗಿದ್ದರು ಎಂದಲ್ಲ. ನಾಸ್ತಿಕತೆಯೆಂದರೆ 'ದೇವರಿಲ್ಲ'ವೆಂಬ ಏಕಪದ ಪರಿಕಲ್ಪನೆಯಲ್ಲ; ಅದು ಜನಹಿತಕ್ಕೆ ಪೂರಕ; ಆತ್ಮವಿಶ್ವಾಸದ ಸಾಧಕ– ಇದು ಗೋರಾ ಚಿಂತನೆ. ಈ ಚಿಂತನೆಯ ಕ್ರಿಯಾರೂಪವೆಂಬಂತೆ ಸರಸ್ವತಿ ಅವರು 1953ರಲ್ಲಿ ಮಹಿಳೆಯರ ಜತೆಗೂಡಿ ಭೂ ಸುಧಾರಣಾ ಚಳವಳಿಯಲ್ಲಿ ಭಾಗವಹಿಸುತ್ತಾರೆ. ಐದು ತಿಂಗಳ ಜೈಲುವಾಸ ಅನುಭವಿಸುತ್ತಾರೆ. ಈ ಕ್ರಿಯೆ ಗೋರಾ ದೃಷ್ಟಿಕೋನಕ್ಕೆ ಅನುಗುಣವಾಗಿಯೇ ಇದೆ.



ಗೋರಾ ಕುಟುಂಬ

ಗೋರಾ ದೃಷ್ಟಿಯಲ್ಲಿ ನಾಸ್ತಿಕವಾದವೂ ದೇವರ ಅಸ್ತಿತ್ವದ ನಿರಾಕರಣೆಯಾಚೆಗೆ ಬೆಳೆಯುತ್ತದೆ. ಮಾನವರಿಗೆ ಸ್ವಾತಂತ್ರ್ಯ, ಸಮಾನತೆ, ಘನತೆಯನ್ನು ತಂದುಕೊಡುವ ಕ್ರಿಯೆ ಮುಖ್ಯವಾಗಬೇಕೆಂದು ಅವರು ಪ್ರತಿಪಾದಿಸುತ್ತಾರೆ. ನಾಸ್ತಿಕವಾದಿ ಸಿದ್ಧಾಂತದೊಳಗೆ ಅಸ್ಪೃಶ್ಯತೆ ನಿವಾರಣೆ, ಜಾತಿ ವಿನಾಶ, ಆರ್ಥಿಕ ಅಸಮಾನತೆಯ ನಿರ್ಮೂಲನೆಯಂತಹ ವಿಚಾರಗಳನ್ನು ತಂದು ದೇವರು, ಧರ್ಮ ಮತ್ತು ಸಾಮಾಜಿಕ–ಆರ್ಥಿಕ ಅಸಮಾನತೆಗಿರುವ ಸಂಬಂಧಗಳನ್ನು ನಿರ್ವಚಿಸುತ್ತಾರೆ. ಅದಕ್ಕನುಗುಣವಾಗಿ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಟ ಕಟ್ಟುತ್ತಾರೆ. ಯಾವುದೇ ಧರ್ಮ ಮತ್ತು ದೇವರ ಕಲ್ಪನೆಗಳು ಜನರಲ್ಲಿ ಮೂಢನಂಬಿಕೆ, ಅಜ್ಞಾನ ಮತ್ತು ಅಸಮಾನತೆಗಳಿಗೆ ಕಾರಣವೆಂದು ನಂಬಿದ ಗೋರಾ ಮನುಷ್ಯ ತನ್ನಲ್ಲಿ ತಾನು ನಂಬಿಕೆಯಿಡಬೇಕೆಂದು ಬಯಸುತ್ತಾರೆ. ಇದೇ ಅವರ ನಂಬಿಕೆಯ ನಾಸ್ತಿಕವಾದ.

ಗೋರಾ ಮತ್ತು ಪತ್ನಿ ಸರಸ್ವತಿ ಒಂದಾಗಿ ನಡೆಸಿದ ಕಾರ್ಯಕ್ರಮಗಳು ಪ್ರಧಾನವಾಗಿ ಸಾಮಾಜಿಕ ಸುಧಾರಣೆಯ ವ್ಯಾಪ್ತಿಗೆ ಬರುತ್ತವೆ. ಎಲ್ಲ ಜಾತಿಯವರ ಸಾಮೂಹಿಕ ಸಹಪಂಕ್ತಿ ಭೋಜನ ಏರ್ಪಡಿಸುವುದು, ಅಂತರ ಜಾತಿ ವಿವಾಹಗಳನ್ನು ನಡೆಸುವುದು ಅಸ್ಪೃಶ್ಯತೆ ವಿರೋಧಿ ಕಾರ್ಯಕ್ರಮಗಳನ್ನು ಆಯೋಜಿಸುವುದು– ಇವೇ ಮುಂತಾದ ಕ್ರಿಯೆಗಳಿಂದ ಗೋರಾದಂಪತಿ ಜನರೊಂದಿಗೆ ಗುರುತಿಸಿಕೊಳ್ಳುತ್ತಾರೆ. ಯಾವುದೇ ಊರಿಗೆ ಕಾರ್ಯಕ್ರಮಕ್ಕೆ ಹೋದಾಗ ದಲಿತಕೇರಿಯಲ್ಲ◌ೇ ವಾಸ್ತವ್ಯ ಹೂಡುತ್ತಾರೆ. ಮುಂದೊಂದು ದಿನ ತಮ್ಮ ನಾಸ್ತಿಕ ಕೇಂದ್ರವನ್ನು ಮುದನೂರಿನಿಂದ ವಿಜಯವಾಡಕ್ಕೆ ಸ್ಥಳಾಂತರಿಸಿ ಅಲ್ಲಿ ಕ್ರಿಯಾಶೀಲರಾಗುತ್ತಾರೆ.

ಗೋರಾ ಅವರಿಗೆ ರಾಜಕೀಯ ಆಸಕ್ತಿಯೂ ಇತ್ತು. 1945ರಲ್ಲಿ ಕಾಂಗ್ರೆಸ್ ಸೇರಿದ ಅವರು 1947ರಲ್ಲಿ ಬಿಡುತ್ತಾರೆ. ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಬಾರದೆಂಬ ಗಾಂಧಿ ಅನಿಸಿಕೆಯನ್ನು ಒಪ್ಪುತ್ತಾರೆ. ಮುಂದೆ 1952ರಲ್ಲಿ ವಿಜಯವಾಡ ಲೋಕಸಭಾ ಚುನಾವಣೆ ಮತ್ತು 1967ರಲ್ಲಿ ವಿಧಾನಸಭಾ ಚುನಾವಣೆಗೆ ಪಕ್ಷ◌ೇತರ ಅಭ್ಯರ್ಥಿಯಾಗಿ ನಿಂತು ಸೋಲುತ್ತಾರೆ. ಪಕ್ಷರಹಿತ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುವ ಗೋರಾ ಅವರು ಚುನಾವಣೆಗೆ ನಿಂತದ್ದು ಸಾಂಕೇತಿಕ ಸ್ಪರ್ಧೆಯಾಗುತ್ತದೆ. ಪಕ್ಷರಹಿತ ಪ್ರಜಾಪ್ರಭುತ್ವ ಸಾಧ್ಯತೆ ಎಂಬ ಪ್ರಶ್ನೆ ಇನ್ನೂ ಇದೆ. ವಿಭಿನ್ನ ಸಂಸ್ಕೃತಿ ಮತ್ತು ದೃಷ್ಟಿಕೋನಗಳಿದ್ದಲ್ಲಿ 'ಅನಿವಾರ್ಯ' ಸಮ್ಮಿಶ್ರ ಸರಕಾರಗಳು ಸಾಧ್ಯವಾಗುತ್ತಿವೆ. ಆದರೆ ಪಕ್ಷರಹಿತ ಪ್ರಜಾಪ್ರಭುತ್ವ ಆದರ್ಶವೇ ಆಗಿ ಉಳಿದಿದೆ.

ಗೋರಾ ಅವರ ಬಹುದೊಡ್ಡ ಆದರ್ಶವೆಂದರೆ 'ಸಂವಾದ ಸಂಸ್ಕೃತಿ'. ಅವರು ದೇವರನ್ನು ನಿರಾಕರಿಸಿದರೂ ಸಂವಾದವನ್ನು ನಿರಾಕರಿಸದೆ ಇದ್ದ ನಿಜ ಪ್ರಜಾಪ್ರಭುತ್ವವಾದಿ. ನಮ್ಮ ದೇಶದ ಮೂವರು ಮುಖ್ಯ ವ್ಯಕ್ತಿತ್ವಗಳ ಜೊತೆಗಿನ ಅವರ ಸಂಬಂಧ ಮತ್ತು ಸಂವಾದ ಯಾವತ್ತಿಗೂ ಆದರ್ಶಪ್ರಾಯವೂ ನಾಸ್ತಿಕವಾದಿಗಳಿಗೊಂದು ಪಾಠವೂ ಆಗಿವೆ.

ಆಂಧ್ರ ವಿಶ್ವವಿದ್ಯಾಲಯದ ವ್ಯಾಪ್ತಿಯ ಒಂದು ಖಾಸಗಿ ಕಾಲೇಜಿನಲ್ಲಿ ಗೋರಾ ಅವರು ಅಧ್ಯಾಪಕರಾಗಿದ್ದರು. ಆಗ 'ದೇವರ



ಗೋರಾ ಮತ್ತು ಪತ್ನಿ ಸರಸ್ವತಿ



ಪರಿಕಲ್ಪನೆ' ಎಂಬ ಒಂದು ಪ್ರಬಂಧವನ್ನು ಬರೆಯುತ್ತಾರೆ. ಅದು ಕಾಲೇಜಿನ ಒಂದು ಸಂಚಿಕೆಯಲ್ಲಿ ಪ್ರಕಟವಾಗುತ್ತದೆ. ಕಾಲೇಜಿನ ಆಡಳಿತ ಮಂಡಳಿಯವರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೆ ಆಂಧ್ರ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ (ಆ ನಂತರದ ರಾಷ್ಟ್ರಪತಿಯವರಾದ) ಡಾ. ಎಸ್. ರಾಧಾಕೃಷ್ಣನ್ ಅಭಿಪ್ರಾಯ ಸ್ವಾತಂತ್ರ್ಯವನ್ನು ಬೆಂಬಲಿಸುತ್ತಾರೆ. ಗೋರಾ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳದೆ ಇದ್ದಾಗ ಕಾಲೇಜ್ ಆಡಳಿತ ಮಂಡಳಿಯು ಅವರನ್ನು ಕಾಲೇಜಿನಿಂದ ಹೊರ ಹಾಕುತ್ತದೆ. ಮುಂದೆ, ಡಾ. ಎಸ್ ರಾಧಾಕೃಷ್ಣನ್ ಅವರು ಮಚಲಿಪಟ್ಟಣದ ಕಾಲೇಜೊಂದರಲ್ಲಿ ಗೋರಾ ಅವರಿಗೆ ಸಸ್ಯಶಾಸ್ತ್ರ ಅಧ್ಯಾಪಕ ಹುದ್ದೆ ಕೊಡಿಸುತ್ತಾರೆ. ಇಲ್ಲಿ ನಾವು ಅರಿಯಬೇಕಾದ ಅಭಿಪ್ರಾಯ ಸ್ವಾತಂತ್ರ್ಯ ಮನ್ನಣೆಯ ವಿಷಯ ಮುಖ್ಯವಾದುದು. ಡಾ. ಎಸ್. ರಾಧಾಕೃಷ್ಣನ್ ಹಿಂದೂ ಧರ್ಮನಿಷ್ಠರು; ದೇವರಲ್ಲಿ ನಂಬುಕೆಯಿರುವ ಆಸ್ತಿಕವಾದಿ. ಗೋರಾ ನಾಸ್ತಿಕವಾದಿ. ಆದರೆ ಇಬ್ಬರ ಮನುಷ್ಯ ಸಂಬಂಧದ 'ಮೌಲ್ಯ'ಕ್ಕೆ ಧಕ್ಕೆಯಾಗಲಿಲ್ಲ. ಇಲ್ಲಿ ಡಾ. ಎಸ್. ರಾಧಾಕೃಷ್ಣನ್ ಅವರ ನಡೆ, ಪ್ರಶಂಸನೀಯ.



1960ರ ಅಕ್ಟೋಬರ್ 8 ರಿಂದ ಗೋರಾ ಅವರು ಸೇವಾಗ್ರಾಮದಿಂದ ದೆಹಲಿಗೆ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳುತ್ತಾರೆ. ಆಡಂಬರ ರಹಿತ ಮತ್ತು ಪಕ್ಷರಹಿತ ರಾಜಕಾರಣದಿಂದ ಉತ್ತಮ ಪ್ರಜಾಪ್ರಭುತ್ವ ಸ್ಥಾಪನೆ ಸಾಧ್ಯವೆಂದು ಸಾರಲು ಈ ಜಾಥಾ. ದೆಹಲಿ ತಲುಪುವುದಕ್ಕೆ ಮುಂಚೆ ಅಂದಿನ ಪ್ರಧಾನಿ ನೆಹರೂ ಅವರಿಗೆ ಗೋರಾ ಅವರು ಪತ್ರ ಬರೆದು ತಮ್ಮ ಆಶಯವನ್ನು ಸ್ಪಷ್ಟಪಡಿಸುತ್ತಾರೆ. ಆಡಂಬರದ ಜೀವನ ಶೈಲಿಯನ್ನು ವಿರೋಧಿಸುತ್ತಾರೆ. ನೆಹರೂ ಅವರು ಗೋರಾ ಅವರನ್ನು ಮಾತುಕತೆಗೆ ಆಹ್ವಾನಿಸುತ್ತಾರೆ. 99 ದಿನ ಕಾಲ್ನಡಿಗೆಯಲ್ಲಿ ಬಂದ ಗೋರಾ 1961ರ ಜನವರಿಯಲ್ಲಿ ನೆಹರೂ ಅವರನ್ನು ಭೇಟಿಯಾಗುತ್ತಾರೆ. ಮಾತುಕತೆ ನಡೆಸುತ್ತಾರೆ. ಪಕ್ಷರಹಿತ ರಾಜಕಾರಣವನ್ನು ಮಹತ್ವ ಕುರಿತು ಮಾತಾಡುತ್ತಾರೆ. ಗೋರಾ ಅವರ ವೈಜ್ಞಾನಿಕ ಮನೋಧರ್ಮ ಮತ್ತು ಕಾರ್ಯಕ್ರಮಗಳನ್ನು ಮೆಚ್ಚುತ್ತಾರೆ.


ಗೋರಾ ಬದುಕಿನ ಅತ್ಯಂತ ವಿಶಿಷ್ಟ ಭಾಗವಾದ ಗಾಂಧಿಭೇಟಿ ಚಾರಿತ್ರಿಕವಾದದ್ದು. ಗೋರಾ ಅವರು ಗಾಂಧಿಯವರ ಉಪ್ಪಿನ ಸತ್ಯಾಗ್ರಹದಿಂದ ಆಕರ್ಷಿತರಾಗುತ್ತಾರೆ. ಈ ಆಕರ್ಷಣೆ ಮತ್ತು ಮನ್ನಣೆ ಎಷ್ಟರಮಟ್ಟಿಗೆ ಇತ್ತೆಂದರೆ ತನ್ನ ಮಗನಿಗೆ 'ಲವಣಂ'ಎಂದು ಹೆಸರಿಡುತ್ತಾರೆ. ಮುಂದೊಂದು ದಿನ ಗಾಂಧಿಯವರನ್ನು ಅವರ ಆಶ್ರಮದಲ್ಲೇ ಭೇಟಿಯಾಗುತ್ತಾರೆ. 1945ರಲ್ಲಿ ಮೂರು ತಿಂಗಳು ಸೇವಾಗ್ರಾಮ ಆಶ್ರಮದಲ್ಲೇ ಉಳಿಯುತ್ತಾರೆ. ಗಾಂಧಿ ಮಾರ್ಗವನ್ನು ಮೆಚ್ಚಿಕೊಳ್ಳುವುದಕ್ಕೆ ಗೋರಾ ಅವರು ಕೊಡುವ ಸಮರ್ಥನೆ ಹೀಗಿದೆ: "ಗಾಂಧೀಜಿಯವರ ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಹೋರಾಟಗಳು ಬ್ರಿಟಿಷರ ವಿರುದ್ಧ ಲಕ್ಷಾಂತರ ಜನರನ್ನು ಬಡಿದೆಬ್ಬಿಸಿವೆ. ಹೋರಾಟದ ಹುರುಪು ನೀಡಿವೆ. ಇದು ಯಾವುದೇ ದೇವರ ಆಜ್ಞೆಯಂತೆ ಆಗಿದ್ದಲ್ಲ. ಗಾಂಧೀಜಿಯವರ ಮಾಡು ಇಲ್ಲವೆ ಮಡಿ ಎಂಬ ಕರೆಯಿಂದ ಉಂಟಾದದ್ದು. ನಾಸ್ತಿಕವಾದದ ಉನ್ನತ ಆದರ್ಶಗಳನ್ನು ಗಾಂಧಿಯವರ ಅಹಿಂಸೆ ಮತ್ತು ಸತ್ಯಾಗ್ರಹ ಮಾರ್ಗಗಳಿಂದಲೇ ಸಾಧಿಸಬೇಕು".

ಗೋರಾ ಅವರ ವಾದ ಸರಣಿ ಮತ್ತು ಕ್ರಿಯಾ ಬದ್ಧತೆಗೆ ಗಾಂಧೀಜಿ ಸಹ ಮಾರು ಹೋಗುತ್ತಾರೆ. ಸಂವಾದದ ಒಂದು ಘಟ್ಟದಲ್ಲಿ "ನಮ್ಮ ಸಮಾಜವು ಮತೀಯ ದ್ವೇಷ ಮತ್ತು ದೌರ್ಜನ್ಯಗಳಿಂದ ಮುಕ್ತವಾಗುವುದಾದರೆ ನಾಸ್ತಿಕ ವಾದಿಯಾದರೂ ಪರವಾಗಿಲ್ಲ" ಎನ್ನುತ್ತಾರೆ. ಗೋರಾ ಅವರ ಮಗಳು ಮನೋರಮಾಳು ದಲಿತ ವರನೊಂದಿಗೆ ಸೇವಾ ಗ್ರಾಮದಲ್ಲಿಯೇ ಮದುವೆಯಾಗಲು ಒಪ್ಪುತ್ತಾರೆ. ಅಷ್ಟೇ ಅಲ್ಲ ವಧು ವರರನ್ನು ಆಶೀರ್ವದಿಸುವಾಗ 'ದೇವರ ಹೆಸರಿನಲ್ಲಿ' ಎನ್ನುವ ಬದಲು 'ಸತ್ಯದ ಹೆಸರಿನಲ್ಲಿ' ಎಂದು ಹೇಳಲು ಒಪ್ಪುತ್ತಾರೆ. ಆದರೆ ಮದುವೆಗೆ ಮುಂಚೆಯೇ ಹುತಾತ್ಮರಾಗಿಬಿಡುತ್ತಾರೆ. ಪಕ್ಕಾ ಆಸ್ತಿಕರಾದ ಗಾಂಧಿ ಮತ್ತು ಬದ್ಧ ನಾಸ್ತಿಕರಾದ ಗೋರಾ ಅವರ ಸಂವಾದ ಮತ್ತು ಸಂಬಂಧ ಇಂದಿಗೂ ಆದರ್ಶದ ಒಂದು ಮಾದರಿಯಾಗಿದೆ.

ನನಗನ್ನಿಸುತ್ತಿದೆ: ದೇವರನ್ನು ಕುರಿತ ಬುದ್ಧ ಗುರುವಿನ 'ಮೌನ'ಮಾತು ನಾಸ್ತಿಕರಿಗೆ ಆದರ್ಶವಾಗಬೇಕು. ಬಸವಣ್ಣನವರ 'ದೇಹವೇ ದೇಗುಲ'ವೆಂಬ ಪರಿಕಲ್ಪನೆ ಆಸ್ತಿಕರಿಗೆ ಆದರ್ಶವಾಗಬೇಕು. ಆಗ ' ದೇವರುಗಳೂ ' ಪಾರಾಗುತ್ತಾರೆ; ಜನಗಳೂ ಪಾರಾಗುತ್ತಾರೆ! ■

ಗಾಂಧಿ ಮತ್ತು ಕರ್ನಾಟಕ

ಭಾಗ – 7



ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲೆ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.

ಕರ್ನಾಟಕ ಪ್ರವಾಸ

ಕರ್ನಾಟಕವು ತನ್ನ ಪಾಲಿನ ಕಾಣಿಕೆಯನ್ನು ಸಮರ್ಪಿಸಲು ಏರ್ಪಾಟು ಮಾಡಿಕೊಂಡಿತು. ಕರ್ನಾಟಕದ ಮೊದಲನೆ ಮುಕ್ಕಾಂ ನಿಪ್ಪಾಣಿ ಎಂದು ಗೊತ್ತಾಗಿತ್ತು. ನಿಪ್ಪಾಣಿ, ಅಲ್ಲಿಂದ ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರಗಳ ಪ್ರವಾಸ ಮುಗಿಸಿಕೊಂಡು ಗಾಂಧಿ ಬೆಳಗಾವಿಗೆ ಬಂದರು.

ನಿಪ್ಪಾಣಿಯಲ್ಲಿ (8–11–1920)

ನವೆಂಬರ್ 8, 1920ರ ದಿನ ಗಾಂಧೀಜಿ ನಿಪ್ಪಾಣಿಗೆ ಬಂದರು. ಅಲ್ಲಿ ಒಂದು ದೊಡ್ಡ ಸಭೆ ನಡೆಯಿತು. ಈ ಪ್ರವಾಸದ ಬಗ್ಗೆ ಮಹದೇವ ದೇಸಾಯಿ ಬರೆದ ವರದಿಯಿಂದ ಇದನ್ನು ಆರಿಸಿಕೊಂಡಿದೆ. ಸಭೆ ಪ್ರಾರಂಭ ಆದಾಗ ಸಭಿಕರಲ್ಲಿ ಒಬ್ಬ ಮನುಷ್ಯ ಬ್ರಾಹ್ಮಣರನ್ನು ಬಲವಾಗಿ ಟೀಕಿಸಿದ. ಅದಕ್ಕೆ ಉತ್ತರ ಕೊಡುತ್ತ ಗಾಂಧೀಜಿ ಹೇಳಿದರು : ಶ್ರೀ ಮಾರುತಿರಾಯರು ಹೇಳಿದ್ದನ್ನೆಲ್ಲ ನಾನು ಎಚ್ಚರಿಕೆಯಿಂದ ಕೇಳಿದ್ದೇನೆ. ಇದು ಅರೆಬರೆ ಸತ್ಯ ಎಂದಿದ್ದರೂ ಬಲು ಅಪಾಯಕಾರಿ. ಅವರು ಬೇಕೆಂದೇ ಹೀಗೆ ಹೇಳಿದ್ದಾರೆ ಎಂದು ನಾನು ಅನ್ನುವುದಿಲ್ಲ, ಎಷ್ಟೋ ಸಲ ತಪ್ಪು ತಿಳುವಳಿಕೆಯಿಂದ ಅರೆ ಬರೆ ಸತ್ಯಗಳನ್ನು ಆಡುತ್ತೇವೆ, ಮಾಡುತ್ತೇವೆ. ಲೋಕದಲ್ಲಿ ಇತರರ ಕೈಯಿಂದ ತಮ್ಮ ಪಾದ ತೊಳೆಸಿಕೊಂಡು, ಅದನ್ನು ತೀರ್ಥ ಎಂದು ಕೊಡುವ ಬ್ರಾಹ್ಮಣರು ಸರಿ ಇಲ್ಲ. ಜನರ ಅಜ್ಞಾನವನ್ನು ಆಧರಿಸಿ ಬರೆದ ಗ್ರಂಥಗಳು ಎಷ್ಟೋ ಹಿಂದೂ ಜನರಲ್ಲಿ ಧರ್ಮಗ್ರಂಥ ಎನಿಸಿಕೊಂಡಿವೆ. ಆದರೆ ಸತ್ಯ




ಅಸತ್ಯಗಳ ವಿವೇಚನೆ ಮಾಡಬೇಕು ನಾವು. ಇಡೀ ಬ್ರಾಹ್ಮಣ ಸಮಾಜವನ್ನು ದ್ವೇಷಿಸುವುದು ಆತ್ಮಘಾತಕತನ. ಅವರಲ್ಲಿ ಕೆಲವರು ಸುಳ್ಳು ಹೇಳಿ, ಸುಳ್ಳು ಶಾಸ್ತ್ರಗಳನ್ನು ತೋರಿಸಿ ಜನರನ್ನು ತಪ್ಪುದಾರಿಗೆ ಎಳೆದಿರಬಹುದು. ಬ್ರಾಹ್ಮಣೇತರರಿಗೆ ಆಣೆ ಮಾಡಿ ಹೇಳುತ್ತೇನೆ; ನಾನು ಕೊರಾನ್, ಬೈಬಲ್ಗಳನ್ನು ಯಥಾಶಕ್ತಿ ಓದಿದ್ದೇನೆ. ಈ ಎಲ್ಲ ಧರ್ಮಗಳಿಗೂ ನಾನು ಸಮಾನ ಗೌರವ ತೋರುತ್ತೇನೆ. ಎಲ್ಲದರಲ್ಲಿಯೂ ಸ್ವಲ್ಪ ಸ್ವಲ್ಪ ಸತ್ಯ ಇದೆ. ಆದರೆ ಯಾವ ಧರ್ಮವೂ ಆತ್ಮಸಂಯಮ, ತ್ಯಾಗಗಳನ್ನು ಯಜ್ಞದ ರೀತಿಯಲ್ಲಿ ನಮ್ಮ ಧರ್ಮದ ಹಾಗೆ ಹೇಳಿಲ್ಲ. ನಮ್ಮಲ್ಲಿರುವ ಯಜ್ಞ ತ್ಯಾಗ ಮುಂತಾದ ಅಭಿಪ್ರಾಯಗಳೆಲ್ಲ ನಮಗೆ ಬ್ರಾಹ್ಮಣರಿಂದ ಬಂದಿವೆ. ಬ್ರಾಹ್ಮಣರಷ್ಟು ತ್ಯಾಗವನ್ನು ಮಾಡಿದವರು ಪ್ರಪಂಚದಲ್ಲಿ ಯಾರೂ ಇಲ್ಲ. ಈ ಕಲಿಯುಗದಲ್ಲಿಯೂ ಕೂಡ, ಇವತ್ತಿಗೂ ಆ ಸಮಾಜ ತೋರಿಸಿದಷ್ಟು ತ್ಯಾಗ , ಪರಿಶುದ್ಧತೆಯನ್ನು ಬೇರೆ ಯಾರೂ ತೋರಿಲ್ಲ. "ಆದ್ದರಿಂದ ನಾನು ಬ್ರಾಹ್ಮಣೇತರ ಶ್ರೀ ಮಾರುತಿರಾಯರಿಗೂ ಹೇಳುತ್ತೇನೆ: ಅವರು ಹೇಳುವ ತಪ್ಪುಗಳೆಲ್ಲವೂ ನಿಜ. ಆದರೆ ಒಂದು ಹೋಲಿಕೆ ನೆನಪಾಗುತ್ತದೆ. ಹಾಲಿನಲ್ಲಿ ಏನಾದರೂ ಕಸ ಇದ್ದರೆ ಕೂಡಲೇ ಕಾಣುತ್ತದೆ. ಅದೇ ಕೊಳಕು ಪದಾರ್ಥದಲ್ಲಿ ಎಷ್ಟು ಹೊಲಸು ಇದ್ದರೂ ತಿಳಿಯುವುದಿಲ್ಲ. ಬ್ರಾಹ್ಮಣರು ಎಂದರೆ ಬ್ರಾಹ್ಮಣೇತರರ ಮನಸಿನಲ್ಲಿ ಬಹಳ ದೊಡ್ಡ ಆದರ್ಶವಾದಿಗಳು ಎಂಬ ಭಾವನೆ ಇದೆ. ಏನು ಲೋಪದೋಷ ಅವರಲ್ಲಿ ಕಂಡುಬಂದರೂ ಕೂಡಲೇ ಅದು ಗಮನ ಸೆಳೆಯುತ್ತದೆ.

ನನ್ನ ಮಟ್ಟಿಗೆ ಹೇಳುವುದಾದರೆ ಬ್ರಾಹ್ಮಣರ ಈ ಅಲ್ಪ ದೋಷಗಳನ್ನು ಉತ್ಪ್ರೇಕ್ಷಿಸಿ ಹೇಳುತ್ತಿರುವುದೇ ಅವರ ಯೋಗ್ಯತೆಗೆ ಸಾಕ್ಷಿ. ಯಾವ ದೇಶದಲ್ಲಿಯೂ ಬ್ರಾಹ್ಮಣರಷ್ಟು ತಪಸ್ಸು ಮಾಡಿದ ಸಮಾಜ ಒಂದು ಇದೆ ಎಂದು ನಾನು ಕೇಳಿಲ್ಲ. ಆದ್ದರಿಂದ ಬ್ರಾಹ್ಮಣರ ತಪ್ಪುಗಳನ್ನು ಲೆಕ್ಕಿಸುವಾಗ, ವಿವೇಕ ಇರಬೇಕು ಎಂದು ಬ್ರಾಹ್ಮಣೇತರ ಬಂಧುಗಳಿಗೆ ಹೇಳುತ್ತಿದ್ದೇನೆ. ಅವರೊಡನೆ ಅಸಹಕಾರ ಮಾಡಿದರೆ ಆತ್ಮನಾಶವೇ.

ಬ್ರಾಹ್ಮಣರ ಸಂಖ್ಯೆ ಚಿಕ್ಕದು. ಬ್ರಾಹ್ಮಣೇತರರು ಬಹುಸಂಖ್ಯಾತರು .ಆದ್ದರಿಂದಲೇ ಯಾರೋ ಒಬ್ಬ ಕಿಡಿಗೇಡಿ ಇವತ್ತಿನ ಬ್ರಿಟಿಷ್ ಸರಕಾರವೂ ಕೂಡ ಒಂದು ಬಗೆಯ "ಬ್ರಾಹ್ಮಣ ಸರಕಾರ " ಎಂದ. ಏಕೆಂದರೆ 30 ಕೋಟಿ ಹಿಂದೂ ,ಮುಸ್ಲಿಂ , ಸಿಖ್ಖರನ್ನು ಅದು ಆಳುತ್ತದೆ. ಖಡ್ಗಬಲದಿಂದ ಅವರು ನಮ್ಮನ್ನು ಅಧೀನದಲ್ಲಿಟ್ಟುಕೊಂಡಿದ್ದಾರೆ. ನಮ್ಮ 30 ಕೋಟಿ ಜನರನ್ನು ಆ ರೀತಿ ಕೆಳಗಿಡಬೇಕು ಎಂಬುದು ಬ್ರಾಹ್ಮಣರ ಬಯಕೆ ಅಲ್ಲ. ತಮ್ಮ ಆತ್ಮ ಸಂಯಮದಿಂದ ಎಷ್ಟೇ ಸ್ವಲ್ಪ ಜನರು ಆದರೂ ಅವರು 30 ಕೋಟಿಯನ್ನು ಅಧೀನದಲ್ಲಿಟ್ಟುಕೊಳ್ಳಬಲ್ಲರು. ಯಾವ ಆತ್ಮಸಂಯಮ ಬಲದಿಂದ ಈ ಬ್ರಿಟಿಷ್ ದಬ್ಬಾಳಿಕೆಯ ಸರಕಾರವನ್ನು ಹೋರಾಡಿ ಉರುಳಿಸ ಬೇಕೆನ್ನುತ್ತೇವೋ, ಬ್ರಾಹ್ಮಣರು ಅದೇ ರೀತಿ ತಮ್ಮ ಸ್ವಾತಂತ್ರ್ಯವನ್ನು, ತಮ್ಮ ಪರಿಶುದ್ಧತೆಯನ್ನು ತಮ್ಮ ಪಾವನ ಜೀವನದಿಂದ ಕಾಪಾಡಿಕೊಂಡಿದ್ದಾರೆ.

ಇವತ್ತು ಬ್ರಾಹ್ಮಣರನೇಕರು ತಮ್ಮ ಧರ್ಮವನ್ನು ಬಿಟ್ಟಿದ್ದಾರೆ. ಮಹಾರಾಷ್ಟ್ರದ ಬ್ರಾಹ್ಮಣರು. ತಮ್ಮ ಶ್ರದ್ಧಾ ಭಕ್ತಿಗಳನ್ನು ಪುನರುಜ್ಜೀವನ ಮಾಡಿಕೊಂಡರೆ ನಾನು ಹೇಳಬೇಕಾದ್ದೇನೂ ಇರುವುದಿಲ್ಲ. ಬ್ರಾಹ್ಮಣರನ್ನು ಈಗಿನ ಹಾಗೆ ದ್ವೇಷಿಸುತ್ತ ಹೋಗಬೇಡಿ; ನಿಮ್ಮ ಸಹನೆಯನ್ನೂ ಮನ ಧೈರ್ಯವನ್ನು ಕಳೆದುಕೊಳ್ಳಬೇಡಿ ಎಂದು ಬ್ರಾಹ್ಮಣೇತರ ಬಂಧುಗಳಿಗೆ ಹೇಳುತ್ತೇನೆ. ಹೀಗೆಂದರೆ ಬ್ರಾಹ್ಮಣರು ಮಾಡಿದ್ದನ್ನೆಲ್ಲ ಗಮನಿಸಬಾರದು ಎಂದಲ್ಲ. ಅನ್ಯಾಯಕ್ಕೆ ತಲೆಬಾಗಬೇಕೆಂದು ನಾನು ಎಂದೂ ಹೇಳುವುದಿಲ್ಲ.

ಈ ಸಾಮ್ರಾಜ್ಯವನ್ನು ಸೋಲಿಸಲು ಈತ ಮಾಡಬೇಕಾದ ಕರ್ತವ್ಯವನ್ನು ಮಾಡುತ್ತಿದ್ದರೆ ಯಾವ ಸಮಾಜವೂ ನಮಗೆ ಅನ್ಯಾಯ ಮಾಡಲಾರದು. ಬ್ರಿಟಿಷ್ ಸರಕಾರದ ಶನಿ ಪ್ರಭಾವ ಬ್ರಾಹ್ಮಣ ಧರ್ಮದಲ್ಲಿ ಇಲ್ಲವೆಂದು ಒಂದು ಚಿಕ್ಕ ಮಗು ಕೂಡ ಹೇಳಬಲ್ಲದು. ಆ ಧರ್ಮದಲ್ಲಿ ಅಂಥದು ಏನೋ ಇದೆ. ಅಸ್ಪೃಶ್ಯರಲ್ಲಿ ಒಬ್ಬ ಭಕ್ತ ಆದರೆ ಬ್ರಾಹ್ಮಣ ಅವನನ್ನು ಪೂಜ್ಯ ಬುದ್ಧಿಯಿಂದ ಗೌರವಿಸುತ್ತದೆ. ಬ್ರಾಹ್ಮಣರಲ್ಲಿ ಬೇಕಾದಷ್ಟು ದೋಷಗಳಿವೆ . ಅದನ್ನು ನೀವು ತೋರಿಸಲೂ ಬಹುದು. ಪಂಚಾಯತಿಯ ಮೂಲಕ ಇವನ್ನು ಬಗೆಹರಿಸಿಕೊಳ್ಳಬೇಕು. ಜಗತ್ತಿಗೆ ಅವರು ಮಾಡಿದ ಸೇವೆಯನ್ನು ಒಪ್ಪಿಕೊಂಡು, ಅವರೊಡನೆ ಸಹಕರಿಸಬೇಕಾದ್ದೇ ಸರಿಯಾದ ದಾರಿ.



ಮಹಾತ್ಮ ಗಾಂಧೀಜಿಯವರ ಧಾರವಾಡ –
ಹುಬ್ಬಳ್ಳಿ ಪ್ರಥಮ ಭೇಟಿಯ ಶತಮಾನೋತ್ಸವ ಸಂದರ್ಭದ ವಿಶೇಷ ಅಂಚೆ ಲಕೋಟೆ

ಬೆಳಗಾವಿಯಲ್ಲಿ – (8–11–1920)

ಬೆಳಗಾವಿಯ ವ್ಯವಸ್ಥೆಯ ಕೆಲಸವನ್ನೆಲ್ಲ ಯಾಳಗಿ ಗೋವಿಂದರಾಯರಿಗೆ ಒಪ್ಪಿಸಲಾಗಿತ್ತು ಕೋಟೆಯ ಬಯಲಿನಲ್ಲಿ ಸಭೆಯ ವ್ಯವಸ್ಥೆಯನ್ನು ಮಾಡಿದ್ದರು. ಕನಿಷ್ಠ ಪಕ್ಷ 15 ಸಾವಿರ ಜನರಾದರೂ ಸಭೆಗೆ ಬಂದಿದ್ದರು. ಇಂಥ ದೊಡ್ಡ ಸಭೆ ಬೆಳಗಾಂವಿಯಲ್ಲಿ ಈ ಮೊದಲು ಎಂದೂ ನಡೆದಿರಲಿಲ್ಲ. ಸಬೆಯ ವ್ಯವಸ್ಥೆ ಚೆನ್ನಾಗಿತ್ತು ಶೌಕತ್ ಆಲಿಗೂ ಗಾಂಧೀಜಿಗೂ ಬೆಳ್ಳಿಯ ಕರಂಡಕಗಳಲ್ಲಿ ಮಾನಪತ್ರ ಅರ್ಪಿಸಿದರು. ಮಹಾತ್ಮರಿಗೆ ಕೊಟ್ಟ ಕರಂಡಕಕ್ಕಿಂತ ಶೌಕತ್ ಆಲಿಗೆ ಕೊಟ್ಟ ಕರಂಡಕ ಸ್ವಲ್ಪ ಚಿಕ್ಕದು. ಈ ತಪ್ಪು ಗಾಂಧೀಜಿಯ ಗಮನಕ್ಕೆ ಬಂತು.

ಭಾಷಣ ಮಾಡುವಾಗ ಈ ಸಂಗತಿಯನ್ನು ಉಲ್ಲೇಖಮಾಡಿ, ಆಕ್ಷೇಪಿಸಿದರು ಅವರು. ಇಂಥ ಅನೇಕ ಪ್ರಸಂಗಗಳಲ್ಲಿ ಗಾಂಧೀಜಿಯ ಸ್ವಭಾವದ ಪರೀಕ್ಷೆ ಆಗುತ್ತಿತ್ತು. ಸಭೆಯ ಕಾರ್ಯಕಲಾಪ ಶಾಂತವಾಗಿ ನಡೆಯಿತು. ಸಭೆಯಲ್ಲಿ ಗಾಂಧೀಟೋಪಿಗಳನ್ನು ಹಂಚಿ ಚಂದಾ ಕೂಡಿಸಲಾಯಿತು. ಸುಮಾರು ಒಂದು ಸಾವಿರ ರೂಪಾಯಿ ವಸೂಲು ಆಯಿತು.

ಮಹಿಳೆಯರ ಸಭೆ


ಸಭೆ ಮಾರುತಿ ಗುಡಿಯಲ್ಲಿ ನಡೆಯಿತು. ಗಾಂಧೀಜಿ ಹೇಳಿದರು: "ಈ ಗುಡಿಯಲ್ಲಿ ನಿಮ್ಮೆಲ್ಲರ ದರ್ಶನದಿಂದ ನಾನು ಪುನೀತನಾದೆ. ಎಲ್ಲಕ್ಕಿಂತ ನನಗೆ ಹೆಚ್ಚು ಸಂತೋಷ ನನ್ನ ಗೆಳೆಯ ಶೌಕತ್ ಆಲಿಯನ್ನು ನೀವು ನೋಡಬಯಸಿದ್ದು. ನಾವೆಲ್ಲರೂ ದಣಿದು ಸ್ವಲ್ಪ ವಿಶ್ರಾಂತಿ ಪಡೆಯುತ್ತಿದ್ದೆವು. ನೀವು ಶೌಕತ್ ಆಲಿಯನ್ನು ನೋಡ ಬಯಸಿದ್ದರಿಂದ ಕೂಡಲೆ ಆತನಿಗೆ ಹೇಳಿಕಳುಹಿಸಿ ಕರೆದುಕೊಂಡು ಬಂದೆ. ಈ ನಿಮ್ಮ ಸದ್ಭಾವನೆಯಲ್ಲಿ ಭಾರತದ ಗೆಲುವು ಅಡಗಿದೆ. ನಮ್ಮ ಹಿಂದೂ ಹೆಂಗಸರು ಮುಸ್ಲಿಂರನ್ನು ಎಲ್ಲಿಯವರೆಗೆ ಅಣ್ಣ–ತಮ್ಮಂದಿರೆಂದು ತಿಳಿಯುವದಿಲ್ಲವೊ ಅಲ್ಲಿಯವರೆಗೆ ನಮ್ಮ ದುರದೃಷ್ಟ ನೀಗದು. ಈ ದೇವಸ್ಥಾನದಲ್ಲಿ ಕುಳಿತು, ನಿಮ್ಮ ಮನಸ್ಸನ್ನು ನೋಯಿಸಲು ನನಗೆ ಇಷ್ಟವಿಲ್ಲ. ನಾನು ಒಬ್ಬ ಸನಾತನಿ ಹಿಂದೂ. ಬೇರೆ ಯಾವ ಧರ್ಮವನ್ನೂ ತಿರಸ್ಕರಿಸಬಾರದೆಂದು ಅಗೌರವದಿಂದ ಕಾಣಬಾರದದೆಂದು ನನ್ನ ಧರ್ಮ ನನಗೆ ಹೇಳಿಕೊಟ್ಟಿದೆ. ಎಲ್ಲಿಯವರೆಗೆ ಇತರ ಮತದವರನ್ನು ಪ್ರೀತಿಸುವುದಿಲ್ಲವೋ, ನಿಮ್ಮ ನೆರೆಹೊರೆಯವರನ್ನು ಪ್ರೀತಿಸುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ದೇಶದ ಕ್ಷೇಮ ಕಷ್ಟ ಎಂದು ನನಗೆ ಗೊತ್ತಾಗಿದೆ. ನಿಮ್ಮ ರೂಢಿಗಳನ್ನು ಬಿಟ್ಟು ಮುಸಲ್ಮಾನರ ಜೊತೆಯಲ್ಲಿ ಊಟ ಮಾಡಿ, ಅವರನ್ನು ಮದುವೆ ಮಾಡಿಕೊಳ್ಳಿ ಎಂದು ಹೇಳಲು ನಾನು ಇಲ್ಲಿಗೆ ಬಂದಿಲ್ಲ. ಆದರೆ ಪ್ರತಿಯೊಬ್ಬ ಮನುಷ್ಯನನ್ನೂ ಪ್ರೀತಿಸಬೇಕು ಎಂದು ಹೇಳಲು ಬಂದಿದ್ದೇನೆ. ಇತರ ಮತಗಳ ಜನರನ್ನು ಪ್ರೀತಿಸ ಬೇಕೆಂದು ನಿಮ್ಮ ಮಕ್ಕಳಿಗೆ ಹೇಳಿಕೊಡಲು ಬೇಡುತ್ತೇವೆ.

ದೇಶದ ಆಗುಹೋಗುಗಳನ್ನು , ರಾಷ್ಟ್ರೀಯ ವಿದ್ಯಮಾನಗಳನ್ನು ಅರಿತುಕೊಳ್ಳಬೇಕೆಂದು ನಿಮ್ಮನ್ನು ಪ್ರಾರ್ಥಿಸುತ್ತೇನೆ. ಇದಕ್ಕಾಗಿ ನೀವು ಉನ್ನತ ವಿದ್ಯಾವ್ಯಾಸಂಗ ಮಾಡಬೇಕಾದ್ದಿಲ್ಲ ದೊಡ್ಡ ಗ್ರಂಥಗಳನ್ನು ಓದಬೇಕಾದ್ದಿಲ್ಲ. ನಮ್ಮ ಭಾವನೆಯ ಪರ ಇರಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರ ನಮ್ಮ ಮುಸ್ಲಿಂ ಸೋದರರ ಭಾವನೆಯನ್ನು ತುಂಬಾ ಗಾಸಿಗೊಳಿಸಿದೆ. ಪಂಜಾಬಿನಲ್ಲಿ ಸ್ತ್ರೀ–ಪುರುಷರ ಮೇಲೆ, ಮಕ್ಕಳ ಮೇಲೆ ಮಾಡಿದ ಭಯಂಕರ ಅತ್ಯಾಚಾರಗಳನ್ನು ಹೇಳಲು ಸಾಧ್ಯ ಇಲ್ಲ. ಈ ಸರಕಾರ ತನ್ನ ತಪ್ಪನ್ನು ಒಪ್ಪಿಕೊಳ್ಳದು, ಪರಿತಾಪ ಪಡದು. ನಮ್ಮನ್ನೇ ತಿರುಗಿ ಕೇಳುತ್ತದೆ; ಈ ಕೌರ್ಯವನ್ನೆಲ್ಲ ಮರೆತುಬಿಡಿ ಎಂದು. ಆದ್ದರಿಂದಲೇ ಇದನ್ನು ರಾಕ್ಷಸೀ ಸರಕಾರ ಎನ್ನುತ್ತೇನೆ . ಈಗ ನಮ್ಮ ಜನರು ಎಲ್ಲರೂ ಅಸಹಕಾರ ಮಾಡಬೇಕು.

ರಾವಣನೊಂದಿಗೆ ಸೀತೆ ಅಸಹಕರಿಸಲಿಲ್ಲವೇ ? ರಾಮಚಂದ್ರ ಅಸಹಕರಿಸಲಿಲ್ಲವೆ? ರಾವಣ ಸೀತೆಯನ್ನು ಎಷ್ಟು ಪ್ರಲೋಭನಗೊಳಿಸಿದ. ಮುತ್ತು ರತ್ನಗಳನ್ನು ಕಳಿಸಿದ. ಸೀತೆ ಅದು ಯಾವುದನ್ನೂ ಕಣ್ಣೆತ್ತಿ ಕೂಡ ನೋಡದೆ, ರಾವಣನ ಹಿಡಿತದಿಂದ ತಪ್ಪಿಸಿಕೊಳ್ಳಲು



ಉತ್ತರ ಕರ್ನಾಟಕದ ಒಂದು ಸಮಾರಂಭದ ನೋಟ ..



ಗಾಂಧೀಜಿಯ ಬೆಳಗಾವಿ ಭೇಟಿಯ ಸಂದರ್ಭದ ಫೋಟೋ ..

ಕಟ್ಟುನಿಟ್ಟಾದ ತಪಶ್ಚರ್ಯೆ ಮಾಡಿದಳು. ಮುಕ್ತಳಾಗುವವರೆಗೆ ಒಳ್ಳೆಯ ಬಟ್ಟೆ ಉಡಲಿಲ್ಲ , ಒಡವೆ ತೊಡಲಿಲ್ಲ.

ರಾಮಲಕ್ಷ್ಮಣರಿಬ್ಬರೂ ಎಷ್ಟು ತಪಸ್ಸು ಮಾಡಿದರು. ಅವರ ಇಂದ್ರಿಯ ಸಂಯಮ ಎಷ್ಟು? ಬರೀ ಹಣ್ಣು–ಹಂಪಲು ತಿನ್ನುತ ಬ್ರಹ್ಮಚರ್ಯವತನಿಷ್ಠರಾಗಿ ಕಾಲ ಕಳೆದರಲ್ಲ. ಈ ದಬ್ಬಾಳಿಕೆಯ ಸರಕಾರ ನಮ್ಮ ಬೆನ್ನಿನ ಮೇಲೆ ಸವಾರಿ ಮಾಡುತ್ತಿರುವವರೆಗೆ ಗಂಡಸಿಗಾಗಲಿ, ಹೆಂಗಸಿಗಾಗಲಿ ಒಳ್ಳೆಯ ಬಟ್ಟೆ ಬರೆ ಉಡಲು ಒಳ್ಳೆಯ ಒಡವೆ ತೊಡಲು ಅಧಿಕಾರವೇ ಇಲ್ಲ. ಭಾರತ ಸ್ವತಂತ್ರ ಆಗುವವರೆಗೆ, ಮುಸಲ್ಮಾನರ ಗಾಯಗಳು ಮಾಯುವವರೆಗೆ ನಾವೆಲ್ಲರೂ ಫಕೀರರ ಹಾಗೆ ಇರಬೇಕು. ಕಷ್ಟ ಸಹನೆಯ ಬೆಂಕಿಯಲ್ಲಿ ನಮ್ಮ ಶ್ರೀಮಂತಿಕೆ ನಮ್ಮ ವಿಲಾಸ ಭೋಗಗಳನ್ನು ಸುಡಬೇಕು. ನಿಮ್ಮ ಸುಖಭೋಗಗಳನ್ನು ಬಿಟ್ಟು ಕಠಿಣ ತಪಶ್ಚರ್ಯೆಯನ್ನು ಅವಲಂಬಿಸಿ,

ನಿಮ್ಮ ಚಿತ್ತವನ್ನು ಶುದ್ಧವಾಗಿಟ್ಟುಕೊಳ್ಳಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಐವತ್ತು ವರ್ಷಗಳ ಹಿಂದೆ ನಮ್ಮ ಹೆಂಗಸರು ಎಲ್ಲರೂ ರಾಟೆ ತಿರುಗಿಸುತ್ತಿದ್ದರು, ಕೈನೂಲಿನ ಬಟ್ಟೆ ಉಡುತ್ತಿದ್ದರು. ಹೆಂಗಸರೇ , ನಿಮಗೆ ಹೇಳುತ್ತೇನೆ; ಎಂದು ನಾವು ಸ್ವದೇಶಿ ಧರ್ಮವನ್ನು ಕೈಬಿಟ್ಟೆವೂ ಅಂದೇ ನಮ್ಮ ಪತನ ಪ್ರಾರಂಭವಾಯಿತು. ನಾವು ಗುಲಾಮರಾದೆವು. ದೇಶದಲ್ಲಿ ಎಲ್ಲ ಕಡೆಯಲ್ಲಿಯೂ ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಉಡಲು ಬಟ್ಟೆ ಇಲ್ಲದೆ ಬೆತ್ತಲೆ ಹೋಗುತ್ತಿದ್ದಾರೆ. ಪರಿಸ್ಥಿತಿ ಹೀಗಿದೆ. ನೀವು ಪ್ರತಿಯೊಬ್ಬರೂ ದಿನವೂ ಒಂದು ಗಂಟೆ ಹೊತ್ತು ನೂತು ಆ ನೂಲನ್ನು ದೇಶಕ್ಕೆ ದಾನ ಕೊಡಬೇಕು ಎಂದು ಬೇಡುತ್ತೇನೆ. ಕೆಲವು ಕಾಲ ನಿಮಗೆ ಸೊಗಸಾದ ಬಟ್ಟೆ ಸಿಗಲಿಕ್ಕಿಲ್ಲ. ಆದರೆ ಸೊಗಸಾದ ನೂಲನ್ನು ನೂಲಲು ಕಲಿತರೆ ಆಗ ಅದು ಸಿಕ್ಕೇ ಸಿಗುತ್ತದೆ. ಇಂಡಿಯಾ ದೇಶ ಗುಲಾಮಗಿರಿಯಲ್ಲಿರುವ ತನಕ, ಒಳ್ಳೇ ಬಟ್ಟೆಯನ್ನು ಉಡುವ ಯೋಚನೆಯನ್ನೇ ಮಾಡಬಾರದು. ಒಳ್ಳೆಯ ನೂಲನ್ನು ನೂಲಲು ಸಮಯ ಬಹಳ ಬೇಕು, ಈಗಲೋ ನಮಗೆ ಘಳಿಗೆ ಘಳಿಗೆಯೂ ಅತ್ಯಮೂಲ್ಯ.

ನಿಮ್ಮಲ್ಲಿ ನಿಸ್ವಾರ್ಥ ತ್ಯಾಗವನ್ನು ನಾನು ಪ್ರಚೋದಿಸ ಬಲ್ಲನಾದರೆ ದೇಶಕ್ಕಾಗಿ ನಿಮ್ಮ ಕೈಮೇಲಿರುವ ಎಲ್ಲ ಒಡವೆಗಳನ್ನು ಸುಲಿದುಕೊಳ್ಳಲು ನಾನು ಹಿಂಜರಿಯೇ . ಅದರಿಂದ ಈ ಹಣವನ್ನು ದೇಶಪಾಂಡೆ ಗಂಗಾಧರರಾಯರು ರಾಷ್ಟ್ರೀಯ ವಿದ್ಯಾಭ್ಯಾಸಕ್ಕೆ, ಸ್ವದೇಶಿ ಪ್ರಚಾರಕ್ಕೆ ಉಪಯೋಗಿಸುತ್ತಾರೆ. ಈ ದೇವಾಲಯಕ್ಕೆ ಹಣ ಹೇಗೆ ನೀಡುತ್ತೀರೋ ಹಾಗೆಯೇ ದೇಶಕ್ಕಾಗಿ ನೀಡಿ. ಕಟುಕನ ಕೈಗೆ ಸಿಕ್ಕ ಬಡ ಹಸುವಿನಂತೆ ಆಗಿದೆ ಭಾರತ. ಅದನ್ನು ಬಿಡಿಸುವುದು ನನ್ನ ಕರ್ತವ್ಯ , ನಿಮ್ಮ ಕರ್ತವ್ಯ . ಕಟ್ಟ ಕಡೆಯಲ್ಲಿ ನಿಮ್ಮನ್ನು ಒಂದು ಮಾತು ಕೇಳುತ್ತೇನೆ. ಶೌಕತ್ ಆಲಿ, ಗಂಗಾಧರ ರಾಯರು, ನಾನು , ಯಾವ ಕೆಲಸ ಮಾಡುತ್ತಿದ್ದೇವೋ ಅದನ್ನು ಹರಸಿ, ಯಾರೂ ಯಾವ ತಂಗಿಯೂ ಏನೋ ದಾಕ್ಷಿಣ್ಯಕ್ಕೊಳಗಾಗಿ ತನ್ನ ಆಭರಣವನ್ನು ಕಳಚಿಕೊಡದೇ ಇರಲಿ.

ನಿಮ್ಮ ಮನಸ್ಸಿನಲ್ಲಿ ಇದು ಪವಿತ್ರ ಕಾರ್ಯ, ಇದು ಕರ್ತವ್ಯ ಎನಿಸಿದರೆ ಮಾತ್ರ ನೀಡಿ. ದೇವರು ನಿಮಗೆ ಧೈರ್ಯವನ್ನೂ ಪರಿಶುದ್ಧತೆಯನ್ನೂ ಕೊಟ್ಟು, ದೇಶಕ್ಕಾಗಿ ತ್ಯಾಗ ಮಾಡುವ ಮನೋಭಾವನೆಯನ್ನು ಕೊಡಲಿ. ಅಂದಿನ ಮಹಿಳೆಯರ ಸಭೆಯಲ್ಲಿ ಎರಡು ಸಾವಿರ ರೂಪಾಯಿಗೆ ಕಡಿಮೆಯಿಲ್ಲದೆ ಆಭರಣಗಳು ಬಂದವು. ಜೊತೆಗೆ ಸ್ವಲ್ಪ ನಗದು ಹಣವೂ ಬಂತು.

ಬೆಳಗಾಂವಿಯಲ್ಲಿ ಬಹಿರಂಗ ಸಭೆ (8–11–1920)

ಈ ಬಹಿರಂಗ ಸಭೆಯಲ್ಲಿ ಗಾಂಧೀಜಿ ಹೇಳಿದರು: "ಮಾರುತಿ ಗುಡಿಯಲ್ಲಿ ನಾನು ಕಂಡ ದೃಶ್ಯದಿಂದ ನನ್ನ ಮೇಲಾದ ಪ್ರಭಾವವನ್ನು ಶಬ್ದಗಳಿಂದ ವರ್ಣಿಸಲಾರೆ. ಪೂನಾದಲ್ಲಿಯೂ ನನಗೆ ಇಂಥದೇ ಅನುಭವ ಆಗಿತ್ತು. ಜನ ತಮ್ಮ ಪ್ರೀತಿಯನ್ನು, ತಮ್ಮ ಒಡವೆಗಳನ್ನು ನನ್ನ ಮೇಲೆ ಮಳೆಗರೆದರು. ಅವರಿಗೆ ಗೊತ್ತು – ರಾಮರಾಜ್ಯ ಪಡೆಯಲು ಸ್ವರಾಜ್ಯ ಸಂಪಾದಿಸಲು ನಾನು ಒಡವೆಗಳನ್ನು ಕೇಳಿದ್ದೇನೆ. ನಮ್ಮ ಕೋಟೀಶ್ವರರು ಇದಕ್ಕೆ ಸಮನಾಗಿ ಏನೂ ಕೊಟ್ಟಿಲ್ಲ .

ಅವರ ಕಾಲಿಗೆ ಬಿದ್ದು ದಾನ ಕೇಳಿದಾಗ ಸ್ವಲ್ಪ ಅವರ ಮನಸ್ಸು

ಕರಗಬಹುದು – ಅಷ್ಟೇ. ಹೆಂಗಸರಿಗೆ ನಾನು ಏನೂ ಬಿನ್ನಹ ಮಾಡಬೇಕಾಗಲಿಲ್ಲ. ಸ್ವಯಂ ಪ್ರೇರಣೆಯಿಂದ ಪ್ರೀತಿಯಿಂದ ನಾನು ಕೇಳಿದ್ದನ್ನೆಲ್ಲ ಕೊಟ್ಟರು. ಈ ಪ್ರೀತಿಯ ಕಾಣಿಕೆಗೆ ಕೋಟಿಗಟ್ಟಲೆ ದಾನ ಸಮ ಅಲ್ಲ.

ಶಹಾಪುರದಲ್ಲಿ ಜನ ಒಂದು ನಿಧಿಯನ್ನು ಅರ್ಪಿಸಿದರು. ತರುವಾಯ ಖಾನಾಪುರ, ನಂದಗಡ, ಅಳಣಾವರ, ಹಳಿಯಾಳ ಪ್ರವಾಸ ಮುಗಿಸಿಕೊಂಡು ಧಾರವಾಡಕ್ಕೆ ಹೋದರು. ಧಾರವಾಡದಿಂದ ಹುಬ್ಬಳ್ಳಿ, ಮುಂದೆ ಗದಗು ಎರಡಕ್ಕೂ .. ಇವೆರಡೂ ಊರು ಕರ್ನಾಟಕದ ಮುಖ್ಯ ವ್ಯಾಪಾರ ಕೇಂದ್ರಗಳು . ಎರಡೂ ಕಡೆ ಸ್ವಾಗತ. ಚೆನ್ನಾಗಿ ನಡೆಯಿತು 12 ಸಾವಿರ ರೂಪಾಯಿ ಕೂಡಿತು. ಗದುಗಿನಿಂದ ಮುಂದೆ ಬಾಗಲಕೋಟೆಗೆ ವಿಜಾಪುರಕ್ಕೆ ಹೋಗಬೇಕು. ಆದರೆ ದೇವಲ್ ಸರ್ಕಸ್ಸಿನ ಮಾಜಿ ವ್ಯವಸ್ಥಾಪಕ ರಾಮಭಾವು ಪಟವರ್ಧನ ಗದುಗಿನಲ್ಲಿ ಭೇಟಿಯಾಗಿ, ಸಾಂಗ್ಲಿಯಲ್ಲಿ ಲೋಕಮಾನ್ಯರ ಸ್ಮಾರಕ ಮಂದಿರದ ಶಂಕುಸ್ಥಾಪನೆ ಗಾಂಧೀಜಿ ಮಾಡಬೇಕೆಂದು ಅಲ್ಲಿನ ಜನ ನಿರ್ಧರಿಸಿದ್ದಾರೆ. ಹಾಗೂ ಈ ಮಂದಿರದ ಕೆಲಸಕ್ಕಾಗಿ ಒಂದು ಲಕ್ಷ ರೂಪಾಯಿ ಕೂಡಿ ಹಾಕಿದ್ದಾರೆ ಎಂದು ಗಾಂಧೀಜಿಗೆ ತಿಳಿಸಿದರು. ಬೇರೆ ಕಡೆಗೆ ಹೋಗುವುದನ್ನು ಕೈಬಿಟ್ಟು, ಅಲ್ಲಿಂದ ಹೀಗೆ ಸಾಂಗ್ಲಿಗೆ ಬರಬೇಕೆಂದು ಬಹಳ ಒತ್ತಾಯ ಮಾಡಿದರು. ಹೇಳಿಕೇಳಿ ಲೋಕಮಾನ್ಯ ತಿಲಕರ ಸ್ಮಾರಕ. ಅದಕ್ಕಾಗಿ ಇಷ್ಟು ದೊಡ್ಡ ನಿಧಿಯ ಸಂಗ್ರಹ! ಗಾಂಧೀಜಿಗೆ ಈ ಅವಕಾಶವನ್ನು ಕಳೆದುಕೊಳ್ಳಲು ಮನಸ್ಸು ಬರಲಿಲ್ಲ. ತಮ್ಮ ಕಾರ್ಯಕ್ರಮವನ್ನು ಸ್ವಲ್ಪ ಬದಲಾಯಿಸಿ ಗದುಗಿನಿಂದ ಸಾಂಗ್ಲಿಗೆ ಹೊರಟರು ಗಾಂಧೀಜಿ.

ಮಿರಜ್ನಲ್ಲಿ

ಮಧ್ಯಾಹ್ನ 12 ಗಂಟೆಗೆ ಮಿರಜ್ಗೆ ಹೋದರು. ಮಿರಜ್ ಸ್ಟೇಶನ್ನಿನಲ್ಲಿ ಇಳಿದು ಅಲ್ಲಿಂದ ನೆಟ್ಟಗೆ ಸಾಂಗ್ಲಿಗೆ ಹೋಗಬೇಕು. ಅಲ್ಲಿನ ಕಾರ್ಯಕ್ರಮ ಮುಗಿಸಿಕೊಂಡು ಮತ್ತೆ ಮಿರಜಿಗೆ ಬಂದು ರಾತ್ರಿ ಅಲ್ಲಿ ಭಾಷಣ ಮಾಡಬೇಕು. ಅಲ್ಲಿಂದ ಮುಂಬಯಿಗೆ ಇದು ರಾಮಭಾವು ಗೊತ್ತು ಮಾಡಿದ ಕಾರ್ಯಕ್ರಮ. ಗಾಂಧೀಜಿಗೂ ಇದು ಗೊತ್ತಿತ್ತು. ಮಿರಜಿಗೆ ಬಂದಾಗ ಸ್ಟೇಶನ್ನಿನಲ್ಲಿಯೂ ಹೊರಗಡೆಯೂ ಜನರು ಸಾವಿರಗಟ್ಟಲೆ ನೆರೆದಿದ್ದರು. ಗಾಡಿಯಿಂದ ಇಳಿದು ಹೊರಗೆ ಹೋಗುವುದೇ ಗಾಂಧೀಜಿಗೆ ಕಷ್ಟವಾಯಿತು. ವ್ಯವಸ್ಥೆಯಾಗಲಿ, ಶಿಸ್ತು ಆಗಲಿ ಎಳ್ಳಷ್ಟೂ ಇರಲಿಲ್ಲ. ಗದ್ದಲವಂತೂ ಸಾಕಷ್ಟು ಇತ್ತು. ಅಲ್ಲಿ ನೆರೆದಿದ್ದ ಜನ ಮೊದಲು ಮಿರಜಿಗೆ ಬರಲಿ ಗಾಂಧೀಜೀ ಆಮೇಲೆ ಸಾಂಗ್ಲಿಗೆ ಹೋಗಲಿ ಎಂದು ಹಟ ಮಾಡಿದರು. ಕಾರ್ಯಕ್ರಮವನ್ನು ಬದಲಾಯಿಸಲು ನಿರಾಕರಿಸಿ ಗಾಂಧೀಜಿ ಕಾರಿನಲ್ಲಿ ಹೋಗಿ ಕುಳಿತರು. ಜನರ ಹಟ ಕಡಿಮೆ ಆಗಲಿಲ್ಲ. ಅವರಿಗೆ ತಿಳಿಸಿ ಹೇಳುವ ಪ್ರಯತ್ನವನ್ನು ಕೆಲವರು ಗೆಳೆಯರು ಮಾಡಿದರು. ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ಕಾರನ್ನು ಮುಂದೆ ಹೋಗಗೊಡದೆ ಜನರು ಅಡ್ಡಿ ಮಾಡಿದರು. ಗಾಂಧೀಜಿ ಕಾರಿನಿಂದ ಕೆಳಗಿಳಿದು "ನನಗೆ ಸಾಂಗ್ಲಿಯ ದಾರಿ ತೋರಿಸಿ " ಎಂದು ಇದಿರಿಗಿದ್ದ ರಸ್ತೆಯಲ್ಲಿ ಮುಂದೆ ನಡೆದುಬಿಟ್ಟರು. ಅಲ್ಲಿಯ ಗುಂಪಿನ ಮುಖಂಡರಿಗೆ "ರಾತ್ರಿ ತಿರುಗಿ ಬರುತ್ತೇನೆ" ಎಂದು ಮಾತುಕೊಟ್ಟು "ನನಗೆ ಸಾಂಗ್ಲಿಗೆ ಹೋಗಲು ಬಿಡಿ' ಎಂದು ನಾನಾ ಬಗೆಯಲ್ಲಿ ಹೇಳಿದರು.

ಆದರೆ ಆ ಜನ ಕೇಳಲಿಲ್ಲ. "ನಾನು ಯಾರ ಒತ್ತಾಯಕ್ಕೂ ಮಣಿಯುವುದಿಲ್ಲ. ಆದದ್ದು ಆಗಲಿ' ಎನ್ನುತ್ತ ಗಾಂಧೀಜಿ ರಸ್ತೆಯನ್ನು ಬಿಟ್ಟು ಒಂದು ಹೊಲದಲ್ಲಿ ನುಗ್ಗಿ ಮುಂದೆ ಸಾಗಿದರು. ಜನರಿಗೆ ಬೇರೆ ಉಪಾಯ ತೋರಲಿಲ್ಲ. ನಿರಾಶೆಯಿಂದ ಹಿಂದಕ್ಕೆ ಹೋದರು. ಸಾಂಗ್ಲಿಯಲ್ಲಿ ಸಭೆ ಆಯಿತು. ಅಲ್ಲಿಗೆ ಹೋದ ಮೇಲೆ ವಿಜಾಪುರದ ಕಾರ್ಯಕ್ರಮನ್ನು ಬದಲಾಯಿಸಿದುದು ತಪ್ಪು ಎನಿಸಿತು. ಆದರೆ ಮಿಂಚಿ ಹೋದ ಮೇಲೆ ಚಿಂತಿಸಿ ಏನು ಪ್ರಯೋಜನ? ಮಿರಜಿಗೆ ಬಂದಾಗ ಅಲ್ಲಿನ ದರಗಾದ ಮುಂದೆ ಗಾಂಧೀಜಿಯ ಭಾಷಣವಾಯಿತು. ಸಭೆಯಲ್ಲಿ ಬಹಳ ಜನ ಇದ್ದರೂ ಒಳ್ಳೆಯ ಶಿಸ್ತು ಇತ್ತು. ಗಾಂಧೀಜಿಗೆ ಅದರಿಂದ ಬಹಳ ಆನಂದ ಆಯಿತು. ನಿಪ್ಪಾಣಿ, ಕಳಾ, ಧಾರವಾಡ. ಹುಬ್ಬಳ್ಳಿ, ಗದಗುಗಳ ಈ ಪ್ರವಾಸದಲ್ಲಿ ಎರಡು ಮೂರು ರಾಷ್ಟ್ರೀಯ ಶಾಲೆ ಪ್ರಾರಂಭ ಆದವು.

ಅಂತೂ 1920ರಲ್ಲಿ ಗಾಂಧೀಜಿಯ ಕರ್ನಾಟಕ ಪ್ರವಾಸ ಅರ್ಧಕ್ಕೆ ನಿಂತುಹೋಯಿತು. ಗದುಗಿನಿಂದ ಸಾಂಗ್ಲಿಗೆ ಹೋದರಲ್ಲ ಅವರು. ಇದರಿಂದ ವಿಜಾಪುರ ಜಿಲ್ಲೆಯ ಪ್ರವಾಸ ನಿಂತುಹೋಗಿತ್ತು. ನಿಂತು ಹೋಗಿದ್ದ ಈ ಪ್ರವಾಸವನ್ನು 1921ರಲ್ಲಿ ಮತ್ತೆ ಮುಂದುವರಿಸಿದರು ಗಾಂಧೀಜಿ. ಮೊಟ್ಟ ಮೊದಲು ಬಾಗಲಕೋಟೆಗೆ ಬಂದರು. ಅಲ್ಲಿಂದ ಮುಂದೆ ವಿಜಾಪುರಕ್ಕೆ ಹೋದರು. ಎರಡೂ ಕಡೆ ಸಭೆ ನಡೆದವು. ಬಾಗಲಕೋಟೆಯಲ್ಲಿ ಭಾಷಣ ಕೇಳಲಿಕ್ಕೆ ಹತ್ತುಸಾವಿರ ಜನ ನೆರೆದಿದ್ದರು. ವಿಜಾಪುರದಲ್ಲಿ 12 ಸಾವಿರ ಜನರ ಸಭೆ.

ಸೇಠ ರಾಮದಾಸರು ತಮ್ಮ ರಾವ್ಸಾಹೇಬ ಬಿರುದನ್ನು ಹಿಂತಿರುಗಿಸಿದ್ದಾರೆ ಎಂಬುದನ್ನು ಸಭೆಯಲ್ಲಿ ಘೋಷಿಸಲಾಯಿತು. ವಿಜಾಪುರದಿಂದ ಮುಂದೆ ಗಾಂಧೀಜಿ ಸೊಲ್ಲಾಪುರಕ್ಕೆ ಹೋದರು. ಅಲ್ಲಿ ಶ್ರೀಯುತ ವಾರದರ ಅಂಗಳದಲ್ಲಿ 20 ಸಾವಿರ ಜನ ಸೇರಿದ್ದರು, ಅಲ್ಲಿ 10 ಸಾವಿರ ರೂಪಾಯಿ ತಿಲಕ ನಿಧಿಗೆ ಬಂತು. ವಿಜಾಪುರ ಸೊಲ್ಲಾಪುರ ಎರಡೂ ಕಡೆ ಪುರಸಭೆಗಳು ಗಾಂಧೀಜಿಗೆ ಮಾನಪತ್ರ ಅರ್ಪಿಸಿದವು. ವಿಜಾಪುರದಲ್ಲಿ ವರ್ತಕರು ಪ್ರತ್ಯೇಕವಾಗಿ ಗಾಂಧೀಜಿಗೆ ಸನ್ಮಾನ ಮಾಡಿದರು. ಗಾಂಧೀಜಿ ಬಾಗಲಕೋಟೆಯಿಂದ ವಿಜಾಪುರಕ್ಕೆ ಮೋಟಾರಿನಲ್ಲಿ ಪ್ರವಾಸ ಮಾಡಿದರು.ದಾರಿಯಲ್ಲಿ ಸಾವಿರಾರು ಜನ ಗುಂಪುಗುಂಪಾಗಿ ನಿಂತು ಗಾಂಧೀ ದರ್ಶನಾರ್ಥಿಗಳಾಗಿ ಕಾದಿದ್ದರು. ಕೈಯಲ್ಲಿ ಹೂಮಾಲೆ, ಗಂಧ–ಪುಷ್ಪ ಆರತಿ. ಗಂಟೆಗಟ್ಟಲೆ ಗಾಂಧೀಜಿಯ ದರ್ಶನಕ್ಕಾಗಿ ಜನರು ಕಾದು ನಿಂತಿದ್ದರು. ಎಲ್ಲಾ ಕಡೆಯಲ್ಲೂ ಗಾಂಧೀಜಿಯದು ಒಂದೇ ಸಂದೇಶ. ಹೊಸ ವರ್ಷದ ಒಳಗಾಗಿ ಒಂದು ಕೋಟಿ ನಿಧಿ ಕೊಡಬೇಕು. ಒಂದು ಕೋಟಿ ಜನ ಕಾಂಗ್ರೆಸ್ ಸದಸ್ಯರಾಗಬೇಕು. ಇಪ್ಪತ್ತು ಲಕ್ಷ ರಾಟೆ ದೇಶದಲ್ಲಿ ತಿರುಗಬೇಕು. ಇಂತ ಮಹತ್ ಕಾರ್ಯಕ್ರಮವನ್ನು ಹಿಂದೆ ಯಾವ ನಾಯಕನಿಂದಲೂ ದೇಶ ಕೇಳಿರಲಿಲ್ಲ.


ಬಾಗಲಕೋಟೆಯಿಂದ ವಿಜಾಪುರಕ್ಕೆ ಪ್ರಯಾಣ ಎಂದರೆ ಉರಿ ಬಿಸಿಲೆಲ್ಲ ನಮ್ಮ ಪಾಲಿಗೇ ..ಮೈಸುಡುತ್ತದೆ. ಇಂಥ ಉರಿಬಿಸಿಲಿನಲ್ಲಿಯೂ ಕೂಡ ದಾರಿ ಉದ್ದಕ್ಕೂ ಜನರು ಖಡಿ ಒಡೆಯುತ್ತಿದ್ದರು. ಎಂದರೆ ಕಲ್ಲನ್ನು ಒಡೆದು ಚೂರು ಚೂರು ಮಾಡಿ ಜಲ್ಲಿ ಕುಟ್ಟುವುದು. ಇದನ್ನು ನೋಡಿ ಗಾಂಧೀಜಿಗೆ ತುಂಬಾ ವ್ಯಥೆ ಆಯಿತು. ಇಂಥ ಕೆಲಸಮಾಡುವ ದುರವಸ್ಥೆ ಹೆಂಗಸರಿಗೆ ಬರಬಾರದು. ಖಾದಿ ಪ್ರಚಾರಮಾಡಿ ಇದನ್ನು ತಡೆಗಟ್ಟಬೇಕು. ಖಾದಿ ಕೆಲಸವೇ ಇದೆಲ್ಲಕ್ಕೂ ಮದ್ದು ಎಂದರು. ■



ಗಾಂಧಿವಾದಿ ಪತ್ರಕರ್ತ

ಜಿ ಎನ್ ರಂಗನಾಥ ರಾವ್

ಜಿ. ಎನ್. ರಂಗನಾಥರಾವ್ 1942ರ ಜನವರಿ 12ರಂದು ಹಾರೋಹಳ್ಳಿಯಲ್ಲಿ ಜನಿಸಿದರು. ಹಾರೋಹಳ್ಳಿ, ತಾವರೇಕೆರೆ, ಕೃಷ್ಣರಾಜಪುರ, ಮಂಚನಬೆಲೆ, ಅಣೆಕೆಂಪಯ್ಯನದೊಡ್ಡಿ, ಚಿಕ್ಕಸೂಲಿಕೆರೆ, ಲಕ್ಷ್ಮೀಪುರ, ಮಾಗಡಿ, ಜಡಿಗೇನಹಳ್ಳಿ, ಹೊಸಕೋಟೆ ಇತ್ಯಾದಿ ಕಡೆ ಇವರ ಬಾಲ್ಯ ಕಳೆಯಿತು. ಸ್ಕೂಲಿದ್ದಲ್ಲಿ ಓದು, ಇಲ್ಲದಿದ್ದಲ್ಲಿ ದನಕಾಯುವುದು, ಹಿಟ್ಟಿಗೆ ಅಂಬಲಿಗೆ ಹೊನ್ನೆಸೊಪ್ಪು ಕಿತ್ತು ತರುವುದು, ಸುಗ್ಗಿ ಕಣದಲ್ಲಿ ಒಂದು ಮೊರ ರಾಗಿಗಾಗಿ, ಬ್ರಾಹ್ಮಣನಾಗಿ 'ಐನೋರ ಕಾಣಿಕೆ'ಗೆ ಕಾಯುತ್ತ ನಿಲ್ಲುವುದು ಹೀಗೆ ತಂದೆಗೆ ವರ್ಗವಾದ ಹಳ್ಳಿಗಾಡಲ್ಲೆಲ್ಲ ಬಾಲ್ಯದ ಇವರ ಪಯಣ ಸಾಗಿತ್ತು.



ಜಿ. ಎನ್. ರಂಗನಾಥರಾವ್ ಎಸ್ ಎಸ್ ಎಲ್ ಸಿ ನಂತರ ಮಿನಿಸ್ಟೀರಿಯರಲ್ ಟ್ರೈನಿಂಗ್ ಮತ್ತು ಟೈಪಿಂಗ್ ಕೋರ್ಸ್ ಮಾಡಿದರು. ಸಬ್ ರಿಜಿಸ್ಟ್ರಾರ್ ಆಫೀಸು, ಡಿ.ಸಿ.ಆಫೀಸು ಇತ್ಯಾದಿ ಕಡೆ ಕೆಲಸ ಮಾಡಿದರು. ತಮ್ಮ ತಂದೆಯವರು ಕಲಿಸಿಕೊಟ್ಟ ಮೌಲ್ಯಯುತ ನೆಲೆಗಳಲ್ಲಿ ಅಲ್ಲಿನ ವೃತ್ತಿ ನಡೆಸುವುದು ಸಾಧ್ಯವಿಲ್ಲವೆನಿಸಿ ಹೊರಬಂದರು. ನೆಲೆ ಇಲ್ಲದೆ ಕುಟಂಬದ ಬದುಕು ಕಷ್ಟದಲ್ಲಿ ಸಾಗಿತು. ಕಾರ್ಲ್ ಮಾರ್ಕ್ಸ್, ಶೇಕ್ಸ್ ಪಿಯರ್, ಕೀಟ್ಸ್, ಲೋಹಿಯಾ, ಅನಕೃ, ಕಾರಂತ, ಕುವೆಂಪು, ಅಡಿಗ, ಎಲಿಯೆಟ್, ಕಾಮು, ಕಾಫ್ಕ, ಲಾರೆನ್ಸ್ ಇತ್ಯಾದಿ ಓದುತ್ತಾ ಬಂದರು. ನಿಲ್ಲದ ತವಕ, ಆತಂಕ, ಸ್ಥಿರ ಸ್ಥಾವರವಾಗುವ ಹೆದರಿಕೆ–ಹೊಯ್ದಾಟಗಳ ಅಭಿವ್ಯಕ್ತಿಗೆ ಇವರಿಗೆ ಪೆನ್ನು ಆಸರೆಯಾಗಿ ಬಂತು.

ಜಿ. ಎನ್. ರಂಗನಾಥರಾವ್ ಕಥೆ, ಕಾದಂಬರಿ, ವಿಮರ್ಶೆ ಇತ್ಯಾದಿ ಬರೆಯುತ್ತ ಸಾಗಿದರು. 'ವಿನೋದ'ದಲ್ಲಿ ಒಂದೆರಡು ಲೇಖನಗಳು ಪ್ರಕಟವಾದವು. 'ಬಂಗಾರದ ಕನಸು', 'ನಂಬಿ ಕೆಟ್ಟವರು' ಕಾದಂಬರಿಗಳ ಹಸ್ತ ಪ್ರತಿಗಳು ಪ್ರಕಾಶಕರ ಕೈ ಸೇರಿ, ಪ್ರಕಟಿಸುವ ವಚನವಿತ್ತು ತಿಂಗಳುಗಳಾದರೂ ಬೆಳಕು ಕಂಡಿರಲಿಲ್ಲ. ಮೂರನೆಯ ಕಾದಂಬರಿ 'ಸುಮಂಗಲಿ' 'ನಗುವ ನಂದ'ದಲ್ಲಿ ಧಾರಾವಾಹಿಯಾಗಿ ಪ್ರಕಟಣೆಗೆ ಸ್ವೀಕೃತವಾಗಿ ಐವತ್ತು ರೂಪಾಯಿ ಮುಂಗಡ ಸಂಭಾವನೆಯೂ ದೊರೆತದ್ದು ಇವರಲ್ಲಿ ಭರವಸೆ ಮತ್ತೆ ಚಿಗುರಿಸಿತು. ಸಾಹಿತಿ ಮತ್ತು ಪತ್ರಕರ್ತ 'ಇಂದಿರಾತನಯ'ರು ಪತ್ರಿಕಾ ವೃತ್ತಿಯ ಓಂನಾಮ ಹೇಳಿಕೊಟ್ಟರು. ಸದಾಶಿವರಂತಹ ಗೆಳೆಯರ ಮೂಲಕ ಇಂಗ್ಲಿಷ್ ಸಾಹಿತ್ಯದ ಓದಿನ ದಿಗಂತವೂ ವಿಸ್ತರಿಸತೊಡಗಿತು. 'ಸಾಕ್ಷಿ', 'ಸಂಕ್ರಮಣ'ಗಳಲ್ಲಿ ಇವರ ವಿಮರ್ಶಾ ಲೇಖನಗಳು ಪ್ರಕಟವಾಗುತ್ತಿದ್ದವು.

ಜಿ. ಎನ್. ರಂಗನಾಥರಾವ್ ಕೆಲಕಾಲ ತಾಯಿನಾಡು ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸಿ, 1962ರಲ್ಲಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಉಪ ಸಂಪಾದಕರಾಗಿ ವೃತ್ತಿ ಜೀವನ ಆರಂಭಿಸಿದರು. ಮುಂದೆ ಅವರು ಸುದೀರ್ಘಕಾಲ 'ಪ್ರಜಾವಾಣಿ' ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದರು. 'ಪ್ರಜಾವಾಣಿ'ಯಲ್ಲಿ ಸುದ್ದಿ ವಿಭಾಗ, ವರದಿ ವಿಭಾಗ, ಸಂಪಾದಕೀಯ ಬರಹ, ಸಾಪ್ತಾಹಿಕ ಪುರವಣಿ, ದೀಪಾವಳಿ ವಿಶೇಷಾಂಕ ಹೀಗೆ ಎಲ್ಲ ರೀತಿಯಲ್ಲಿ ಕೆಲಸ ಮಾಡಿದ ಇವರು ಪತ್ರಕರ್ತರಾಗಿ, ಸಾಹಿತ್ಯ –ಚಲನಚಿತ್ರ– ರಂಗಭೂಮಿ ವಿಮರ್ಶಕರಾಗಿ ಬೆಳೆದರು. 1990ರಲ್ಲಿ ಸಹ ಸಂಪಾದಕರಾದ ನಂತರ ಬಹುತೇಕ ನಿವೃತ್ತರಾಗುವವರೆಗೆ ಮೂರನೆಯ ಸಂಪಾದಕೀಯವನ್ನು ಬರೆದರು. ಇವರ ಆಯ್ದ ಮೂರನೆಯ ಸಂಪಾದಕೀಯ 'ಚಿಲಿಪಿಲಿ' ಲಲಿತ ವಾಚಿಕೆಗಳು ಅಭಿಧಾನದಲ್ಲಿ 1999ರಲ್ಲಿ ಪ್ರಕಟವಾಯಿತು.


ಜಿ.ಎನ್. ಆರ್. 'ಪ್ರಜಾವಾಣಿ'ಯಿಂದ ನಿವೃತ್ತಿ ಹೊಂದಿದ ನಂತರದಲ್ಲಿ ಭಾರತೀಯ ವಿದ್ಯಾ ಭವನದ ಕಾಲೇಜಿನಲ್ಲಿ ಹಾಗೂ ಸರ್ಕಾರಿ ಕಲಾ ಕಲೇಜಿನಲ್ಲಿ ಪತ್ರಿಕಾ ವ್ಯವಸಾಯ ಮತ್ತು ಸಂವಹನ ಕಲೆ ಕುರಿತು ಬೋಧಿಸಿದರು. ಕೆಲವು ವರ್ಷ 'ಕಸ್ತೂರಿ' ಮಾಸ ಪತ್ರಿಕೆಯ ಸಂಪಾದಕತ್ವವನ್ನು ನಿರ್ವಹಿಸಿದರು.

ರಂಗನಾಥರಾವ್ 'ನವರಂಗ' ಕಾವ್ಯನಾಮದಿಂದ ಕಾದಂಬರಿ, ಸಣ್ಣಕತೆ, ನಾಟಕ, ಪ್ರಬಂಧಗಳನ್ನು ರಚಿಸಿದರು. ಅವರು ಮಹತ್ವದ ಸಾಹಿತ್ಯ ವಿಮರ್ಶಕರು. ಅವರು ವಿದ್ಯಾರ್ಥಿಗಳನ್ನು ಗಮನದಲ್ಲಿ ಇಟ್ಟುಕೊಂಡು ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಮಹತ್ವದ ಕೃತಿಗಳನ್ನೂ ರಚನೆ ಮಾಡಿದ್ದಾರೆ. ಅವರು 'ನೇಸರ ನೋಡು ನೇಸರ ನೋಡು' ಎಂಬಂತಹ ಅಂಕಣಗಳನ್ನೂ ಬರೆಯುತ್ತಿದ್ದರು. ಇವರ ಕೃತಿಗಳಲ್ಲಿ ಹೊಸ ತಿರುವು, ಮಾಸ್ತಿಯವರ ನಾಟಕಗಳು, ಒಳನೋಟ, ಹಿಂದಣ್ಣ ಹೆಜ್ಜೆ, ಅನ್ಯೋನ್ಯ, ಗುಣ– ದೋಷ ಮುಖ್ಯ ಮುಂತಾದವು ವಿಮರ್ಶಾ ಕೃತಿಗಳು. ಶೇಕ್ಸ್ ಪಿಯರ್ನ ರೋಮಿಯೋ ಜೂಲಿಯಟ್ ಮತ್ತು ಆಂಟನಿ ಕ್ಲಿಯಾಪಾತ್ರ, ಬ್ರೆಕ್ಟನ ಕಕೇಷಿಯನ್ ಚಾಕ್ ಸರ್ಕಲ್, ಅನ್ವಿಯ ಅಂತಿಗೊನೆ, ಜೀನ್ ಜೆನೆಯ ದಿ ಬ್ಲ್ಯಾಕ್ಸ್, ಟಾಲ್ ಸ್ಟಾಯ್ನ ಡೆತ್ ಆಫ್ ಇವಾನ್ ಇಲಿಚ್, ಸೋಲ್ಜೆನಿತ್ಸಿನ್ನ ಇವಾನ್ ದೆನಿಸೊವಿಚ್, ಕಾಫ್ಕ ಕತೆಗಳು, ಓ ಹೆನ್ರಿ ಕತೆಗಳು, ಜೆ.ಡಿ ಬರ್ನಾಲ್ನ ಸೋಶಿಯಲ್ ಸೈನ್ಸ್ ಇನ್ ಹಿಸ್ಟರಿ, ರಾಮಚಂದ್ರ ಗುಹ ಅವರ ಇಂಡಿಯಾ ಆಫ್ಟರ್ ಗಾಂಧಿ (ಬಾಪೂ ನಂತರದ ಭಾರತ), ಮೇಕರ್ಸ್ ಆಫ್ ಮಾಡರ್ನ್ ಇಂಡಿಯಾ (ನವಭಾರತದ ನಿರ್ಮಾಪಕರು), ಪೇಟ್ರಿಯೆಟ್ಸ್ ಅಂಡ್ ಪಾರ್ಟಿಸಾನ್ಸ್ (ದೇಶಪ್ರೇಮಿಗಳು ಮತ್ತು ಪಕ್ಷಪಾತಕರು), ಗಾಂಧಿ ಬಿಫೋರ್ ಇಂಡಿಯಾ (ಗಾಂಧಿ ಮಹಾತ್ಮರಾದುದು) ಮತ್ತು ಕಾಲಾತೀತ ವಿಖ್ಯಾತ ಖಲೀಲ್ ಗಿಬ್ರಾನ್ ಮುಂತಾದವು ಇವರ ಅನುವಾದಗಳಲ್ಲಿ ಸೇರಿವೆ.

ಜಿ. ಎನ್. ರಂಗನಾಥರಾವ್ ಅವರಿಗೆ 2009ನೇ ಸಾಲಿನ ಖಾದ್ರಿ ಶಾಮಣ್ಣ ಪ್ರಶಸ್ತಿ ಹಾಗೂ 2018ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ಸಂದೇಶ ಪ್ರಶಸ್ತಿ, ಕುವೆಂಪು ಭಾಷಾಭಾರತಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, ಟೀಎಸ್ಸಾರ್ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, 'ಮಹಾತ್ಮ ಗಾಂಧಿ ಒಂದು ಸತ್ಯಕಥೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಸಾಹಿತ್ಯ ಪ್ರಶಸ್ತಿ, ಪರಿಮಳ ಪ್ರಶಸ್ತಿ ಮುಂತಾದ ಅನೇಕ ಗೌರವಗಳು ಸಂದಿದ್ದವು.

ಜಿ. ಎನ್. ರಂಗನಾಥರಾವ್ ಅವರು ತಮ್ಮಬಾಳ ಸಂಗಾತಿ ಸರಳಾ ಅವರ ಹೆಸರಿನಲ್ಲಿ ಉದಯೋನ್ಮುಖ ಮಹಿಳಾ ಲೇಖಕಿಯರನ್ನು ಪ್ರೋತ್ಸಾಹಿಸುವ ಸಲುವಾಗಿ ಟ್ರಸ್ಟ್ ಒಂದನ್ನು ಸ್ಥಾಪಿಸಿದ್ದರು.

ಜಿ. ಎನ್. ರಂಗನಾಥರಾವ್ ಅವರು 2023ರ ಅಕ್ಟೋಬರ್ 9ರಂದು ನಿಧನರಾದರು. ಇಂತಹ ಸಾಧಕರ ನಿರ್ಗಮನ ಕನ್ನಡ ಸಾಹಿತ್ಯ ಮತ್ತ ಪತ್ರಿಕೋದ್ಯಮಕ್ಕೆ ಒದಗಿದ ಬಲು ದೊಡ್ಡ ನಷ್ಟ. ■



ವಿಶ್ವಮಾನ್ಯ ಮಹಾತ್ಮ ಗಾಂಧಿ

ಆಲ್ಬರ್ಟ್ ಐನ್ ಸ್ಟೀನ್ ಮತ್ತು ಮಹಾತ್ಮ ಗಾಂಧಿ ಇಬ್ಬರೂ ಪರಸ್ಪರ ಅಭಿಮಾನಿಗಳು. ಅವರಿಬ್ಬರ ನಡುವೆ ಬಹಳ ಪತ್ರ ವಿನಿಮಯ ನಡೆಯುತ್ತಿತ್ತು. ಐನ್ ಸ್ಟೀನ್, ಗಾಂಧಿಯವರನ್ನು ಮುಂದಿನ ಪೀಳಿಗೆಯ ಮಾದರಿ ವ್ಯಕ್ತಿ ಎಂದು ಕರೆದಿದ್ದರು. ಗಾಂಧೀಜಿಯವರ ಮುನ್ನೋಟಗಳು ನಮ್ಮ ಕಾಲದ ಎಲ್ಲ ರಾಜಕೀಯ ನಾಯಕರ ನೋಟಗಳಿಗಿಂತ ಹೆಚ್ಚಿನ ತಿಳಿವಳಿಕೆಯ ನೋಟಗಳಾಗಿವೆ ಎನ್ನುವುದು ನನ್ನ ನಂಬಿಕೆ ಎಂದು ಒಂದು ಪತ್ರದಲ್ಲಿ ಬರೆದಿದ್ದರು.

"ರಕ್ತ ಮಾಂಸಗಳಿಂದ ಕೂಡಿ ಜೀವಂತವಾಗಿದ್ದ ಇಂಥ ಒಬ್ಬ ವ್ಯಕ್ತಿ ಈ ಭೂಮಿಯಲ್ಲಿ ನಡೆದಾಡಿದ್ದ ಎನ್ನುವುದನ್ನು ಮುಂದಿನ ಪೀಳಿಗೆಯ ಜನರು ನಂಬಲಾರರು" ಎನ್ನುವುದು ಗಾಂಧೀಜಿಯವರ ಬಗ್ಗೆ ಆಲ್ಬರ್ಟ್ ಐನ್ ಸ್ಟೀನ್ ಅವರ ಐತಿಹಾಸಿಕ ಹೇಳಿಕೆ.



ಗಾಂಧಿ ಚಿಂತನೆ 06

– ಜಗದೀಶ್ ಕೊಪ್ಪ

ಗಾಂಧೀಜಿಯವರಿಗೆ ಪ್ರಜಾತಾಂತ್ರಿಕ ಮೌಲ್ಯಗಳು ಹೇಗಿರಬೇಕು ಮತ್ತು ಸರ್ಕಾರ ಹಾಗೂ ಜನತೆಯ ಕರ್ತವ್ಯಗಳು ಹೇಗಿರಬೇಕು ಎಂಬುದರ ಕುರಿತು ಸ್ಪಷ್ಟವಾದ ಕಲ್ಪನೆಗಳಿದ್ದವು. ಇವೆಲ್ಲವನ್ನೂ ಅವರು ತಮ್ಮ ಸ್ವರಾಜ್ಯ ಎಂಬ ಪರಿಕಲ್ಪನೆಯ ಮೂಲಕ ವಿಸ್ತಾರಗೊಳಿಸಿದ್ದರು. ಅವರ ದೃಷ್ಟಿಕೋನದಲ್ಲಿ ಒಂದು ಪ್ರಜಾಪ್ರಭುತ್ವದ ಸರ್ಕಾರವು ಕೇವಲ ಒಂದು ಗುಂಪಿನ ನಿರ್ಣಯದ ಮೇಲೆ ನಡೆಯುವಂತಹದ್ದಲ್ಲ. ಅಲ್ಲಿನ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಪ್ರಜೆಯ ಪಾಲ್ಗೊಳ್ಳುವಿಕೆ ಮತ್ತು ಆತನ ಅಥವಾ ಆಕೆಯ ಪರ ಇಲ್ಲವೆ ವಿರೋಧದ ಅಭಿಪ್ರಾಯವು ನಿರ್ಣಾಯಕವಾಗಿರುತ್ತದೆ.

ಅಧಿಕಾರವೆಂಬುವುದು ಒಂದು ವಿನಾಶಕಾರಿ ಉಪದ್ರವದಂತೆ. ಅದು ತಾನು ಮುಟ್ಟಿದ್ದೆಲ್ಲವನ್ನು ಕಲುಷಿತಗೊಳಿಸುತ್ತದೆ. ಜೊತೆಗೆ ಸದ್ಗುಣ, ತಾಳ್ಮೆ, ಸ್ವಾತಂತ್ರ್ಯ, ಸತ್ಯ ಇಂತಹುಗಳ ಪಾಲಿಗೆ ಅಡ್ಡಿಯಾಗುವ ವ್ಯವಸ್ಥೆ. ಅದು ವಿಧೆಯತೆಯ ಹೆಸರಿನಲ್ಲಿ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡುತ್ತದೆ ಎಂಬ ಇಂಗ್ಲೀಷ್ ಕವಿಯ ಷೆಲ್ಲಿಯ ಮಾತುಗಳಲ್ಲಿ ಗಾಂಧೀಜಿಯವರಿಗೆ ಅಪಾರ ನಂಬಿಕೆಯಿತ್ತು. ಹಾಗಾಗಿ ಅವರು ತಮ್ಮ ಸ್ವರಾಜ್ಯ ಪರಿಕಲ್ಪನೆಯನ್ನು ವಿಸ್ತರಿಸಿ ಎಲ್ಲರಿಗೂ ಅರ್ಥವಾಗುವಂತೆ ವ್ಯಾಖ್ಯಾನಿಸಿದರು.

ಬಹುತೇಕ ನಾಗರೀಕರು ಸರ್ಕಾರದ ಆಡಳಿತ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಬಯಸುವುದಿಲ್ಲ. ಈ ಕಾರಣದಿಂದಾಗಿ ಪರೋಕ್ಷವಾಗಿ ಸರ್ಕಾರದ ವೈಫಲ್ಯದಲ್ಲಿ ಅವರೂ ಸಹ ಪಾಲ್ಗೊಂಡಿರುತ್ತಾರೆ. ಇದರಿಂದಾಗಿ ಆಡಳಿತ ಯಂತ್ರದ ತಪ್ಪಿಗೆ ಪ್ರತಿಯೊಬ್ಬ ಪ್ರಜೆಯೂ ನೈತಿಕ ಹೊಣೆಗಾರನಾಗುತ್ತಾನೆ. ಗಾಂಧೀಜಿಯವರು ತಮ್ಮದೇ ಆದ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸಿದ ಈ ಮಾತುಗಳನ್ನು ಇಂದಿನ ವರ್ತಮಾನದ ಜಗತ್ತಿಗೂ ಸಹ ಅನ್ವಯಿಸಬಹುದು.

ಗಾಂಧೀಜಿಯವರ ಮಾತುಗಳಲ್ಲಿ ಹೇಳುವುದಾದರೆ, ಪ್ರಜೆಗಳಿಗೆ ಸ್ವರಾಜ್ಯ ಬರುವುದು ಅಧಿಕಾರ ಗ್ರಹಣದಿಂದ ಅಲ್ಲ, ಆಡಳಿತ ಯಂತ್ರ ತಪ್ಪು ಎಸೆಗಿದಾಗ ಅಥವಾ ಅಧಿಕಾರ ದುರುಪಯೋಗವಾದಾಗ ಅದನ್ನು ಎಲ್ಲರೂ ಒಗ್ಗಟ್ಟಾಗಿ ವಿರೋಧಿಸಿದಾಗ ನಿಜವಾದ ಸ್ವರಾಜ್ಯ ಲಭ್ಯವಾಗುತ್ತದೆ. ಪ್ರಭುತ್ವವನ್ನು ನಿಯಂತ್ರಿಸಿ, ಅದನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದು ನಿಜವಾದ ಸ್ವರಾಜ್ಯ ಎಂಬುದು ಗಾಂಧೀಜಿಯವರ ನಿಲುವಾಗಿತ್ತು.

ಭಾರತದಂತಹ ದೇಶದಲ್ಲಿ ಅಧಿಕಾರವಂಚಿತ ಬಹುಸಂಖ್ಯಾತರ ಆಳ್ವಿಕೆಯ ವ್ಯಾಪ್ತಿ ಕಿರಿದಾದುದು ನಿಜ, ಆದರೆ, ಅವರುಗಳ ಅಭಿಪ್ರಾಯ ಏನೇ ಇರಲಿ ಅವರ ಮಾತಿಗೆ ಎಲ್ಲರೂ ಒಪ್ಪಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ಎಂದರೆ ಜನರು ಕುರಿಗಳ ಹಾಗೆ ತಲೆ ತಗ್ಗಿಸಿ ಬಾಳುವುದಲ್ಲ. ಪ್ರಜಾ ತಾಂತ್ರಿಕ ವ್ಯವಸ್ತೆಯಲ್ಲಿ ಪ್ರತಿಯೊಬ್ಬ ಪ್ರಜೆಯ ಸ್ವಾತಂತ್ರ್ಯಕ್ಕೆ ಮತ್ತು ಅಭಿಪ್ರಾಯಕ್ಕೆ ಮನ್ನಣೆ ದೊರೆತಾಗ ಸ್ವರಾಜ್ಯ ಪರಿಕಲ್ಪನೆ ಅರ್ಥ ಬರುತ್ತದೆ ಎಂದು ಗಾಂಧೀಜಿಯವರು ವಿವರಿಸುತ್ತಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆ ಕೇವಲ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡರೆ ಸಾಲದು, ಅದು ತನ್ನ ಹೃದಯವನ್ನು ಬದಲಾಯಿಸಿಕೊಳ್ಳಬೇಕು. ನಿಜವಾದ ಪ್ರಜಾಪ್ರಭುತ್ವವೆಂದರೆ, ಸಮಾನತೆ ಮತ್ತು ಸಹೋದರತೆಯ ನೆಲೆಯಲ್ಲಿ ಎಲ್ಲರ ಸೇವೆ ಮಾಡುತ್ತಾ ಪ್ರಜೆಗಳ ಹಿತವನ್ನು ಕಾಪಾಡುವುದೇ ನಿಜವಾದ ಪ್ರಜಾಪ್ರಭುತ್ವ ಎಂದು ಬಣ್ಣಿಸಿದ ಮಹಾತ್ಮರು, ಸಮಾಜದ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸುವ ಕಲೆ ಮತ್ತು ವಿಜ್ಞಾನವನ್ನು ಅದು ಒಳಗೊಂಡಿರಬೇಕು ಎನ್ನುತ್ತಿದ್ದರು.

ನನ್ನ ಪ್ರಜಾಪ್ರಭುತ್ವದ ಕಲ್ಪನೆಯೆಂದರೆ, ಒಬ್ಬ ಬಲಿಷ್ಠ ಪ್ರಜೆಗೆ ಇರುವ ಅವಕಾಶ ಈ ಸಮಾಜದ ಕಟ್ಟ ಕಡೆಯ ಮನುಷ್ಯನಾದ ದುರ್ಬಲನಿಗೂ ಇರಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು. ಇಂತಹ ಪ್ರಕ್ರಿಯೆಗಳು ಅಹಿಂಸೆಯ ಮಾರ್ಗದ ಹೊರತಾಗಿ ಹಿಂಸೆ ಅಥವಾ ಬಲವಂತವಾಗಿ ಜಾರಿಗೆ ಬರಬಾರದು ಎಂಬುದು ಅವರ ಖಚಿತ ನಿಲುವಾಗಿತ್ತು.

ಭಾರತದಂತಹ ಗ್ರಾಮಗಳನ್ನು ಹೊಂದಿರುವ ರಾಷ್ಟ್ರಗಳಲ್ಲಿ ಪ್ರತಿಯೊಂದು ಹಳ್ಳಿಯೂ ತನ್ನನ್ನು ತಾನೇ ಆಳಿಕೊಳ್ಳುವ ಸ್ಥಿತಿಯನ್ನು ತಲುಪಬೇಕು. ಇದು ಒಂದು ರೀತಿಯಲ್ಲಿ ನಿಜವಾದ ಪ್ರಜಾಪ್ರಭುತ್ವವೂ ಹೌದು, ಸ್ವರಾಜ್ಯವೂ ಹೌದು. ಈ ದೇಶದ ಪ್ರತಿಯೊಂದು ಸ್ವತಂತ್ರ ಘಟಕವಾಗಿ ಕಾರ್ಯ ನಿರ್ವಹಿಸುವಂತಹ ಹಂತ ತಲುಪಬೇಕು ಎಂಬುದು ಗಾಂಧೀಜಿಯವರ ಕನಸಾಗಿತ್ತು.

ನಿಜವಾದ ರಾಜಕೀಯದ ಅಧಿಕಾರದ ಗುರಿಯೆಂದರೆ, ಅದು ದೇಶದ ಜನರು ಪ್ರತಿಯೊಂದು ರಂಗದಲ್ಲಿ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಸಹಾಯಕವಾಗುವ ಒಂದು ಮಾಧ್ಯಮವಾಗಬೇಕು ಎನ್ನುತ್ತಿದ್ದ ಗಾಂಧೀಯವರು ರಾಜಕೀಯ ಅಧಿಕಾರದ ಮೂಲಕ ಜನರು ತಮ್ಮ ಪ್ರತಿನಿಧಿಗಳ ಮುಖಾಂತರ ರಾಷ್ಟ್ರ ಜೀವನವನ್ನು ನಡೆಸುವಂತಾಗಬೇಕು ಎಂದು ಆಶಿಸುತ್ತಿದ್ದರು. ಜೊತೆಗೆ ಒಂದು ಆದರ್ಶ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವ ಕಾರಣಕ್ಕೂ ಮತ ಬೇಧ, ವರ್ಗ ಬೇಧ ಇರಕೂಡದು ಎನ್ನುತ್ತಿದ್ದ ಗಾಂಧೀಜಿಯವರು ಈ ಜಗತ್ತಿನಲ್ಲಿ ಭಿನ್ನಾಭಿಪ್ರಾಯ ಇರದ ಸಮಾಜವಿರಲು ಸಾಧ್ಯವಿಲ್ಲ ನಿಜ. ಆದರೆ, ಪರಸ್ಪರ ಪ್ರೀತಿ ಮತ್ತು ತಿಳಿವಳಿಕೆಯ ಮೂಲಕ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ಸಾಧ್ಯ ಎನ್ನುತ್ತಿದ್ದರು.

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿಯವರು ಪ್ರತಿ ಪಾದಿಸಿದ ಮಾನವೀಯ ಮೌಲ್ಯಗಳು ಮತ್ತು ಪ್ರಜಾ ಪ್ರಭುತ್ವದ ಮೌಲ್ಯಗಳು ಇಂದಿಗೂ ಸಹ ಇಡೀ ಜಗತ್ತಿಗೆ ಮಾದರಿಯಾಗುವಂತಿವೆ. ■

ವಿಶ್ವವ್ಯಾಪಿ ಬಾಪೂ



ಅಮೇರಿಕಾ ದೇಶದ ಅಟ್ಲಾಂಟಾ ರಾಜ್ಯದ ಮಿಸ್ಸಿಸ್ಸಿಪಿ ಅಲ್ಲಿನ ದೊಡ್ಡ ನಗರ. ಇದರ ಪಕ್ಕದಲ್ಲಿಯೇ ಮಿಸ್ಸಿಸ್ಸಿಪಿ ನದಿ ಹರಿಯುತ್ತದೆ. ಈ ನದಿಯ ಕಾರಣದಿಂದಾಗಿಯೇ ನಗರಕ್ಕೆ ಈ ಹೆಸರು ಬಂದಿರಲೂ ಬಹುದು. ಈ ನಗರದ ಹೃದಯ ಭಾಗದಲ್ಲೇ ಹರಿಯುವ ಮಿಸ್ಸಿಸ್ಸಿಪಿ ನದಿಯ ದಂಡೆಯಲ್ಲಿ 2021ರ ಅಕ್ಟೋಬರ್ ತಿಂಗಳಲ್ಲಿ ಭಾರತದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆ ಲೋಕಾರ್ಪಣೆಗೊಂಡಿತು. ಡಾ. ಸ್ವಾತಿ ಕುಲಕರ್ಣಿಯವರು (ಕಾನ್ಸುಲೇಟ್ ಜನರಲ್ ಆಫ್ ಇಂಡಿಯಾ – ಅಟ್ಲಾಂಟಾ) ಗಾಂಧಿ ಪುತ್ಥಳಿಯನ್ನು ಅನಾವರಣಗೊಳಿಸಿದರು.

ಗಾಂಧಿ ಮೂರ್ತಿಯ ಕಟ್ಟೆಯ ಕೆಳ ಭಾಗದಲ್ಲಿ ' ಅಮೆರಿಕೆಯ ಗಾಂಧಿ ' ಎಂದು ವಿಶ್ವ ಪ್ರಸಿದ್ಧಿ ಪಡೆದ ಡಾ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಅವರು ಬಾಪೂಜಿ ಬಗ್ಗೆ ಹೇಳಿರುವ ಈ ಮಹತ್ವದ ಸಾಲುಗಳನ್ನು ಬರೆಯಲಾಗಿದೆ..

" Gandhi was inevitable. If humanity is to progress, Gandhi is inescapable. He lived, thought and acted, inspired by the vision of humanity evolving toward a world of peace and harmony. We may ignore Gandhi at our own risk."

■







ಸ್ವಾತಂತ್ರ್ಯ ಚಳವಳಿಗೆ ಕಲಾವಿದ ನಂದಲಾಲ್ ಬೋಸ್ ಕೊಡುಗೆ




ಭಾರತೀಯ ಸ್ವಾತಂತ್ರ್ಯ ಚಳವಳಿಗೆ ಕಲಾವಿದರ ಕಲಾತ್ಮಕ ಕೊಡುಗೆಗಳಲ್ಲಿ ಒಂದು ದೊಡ್ಡ ಕೊಡುಗೆ ನಂದಲಾಲ್ ಬೋಸ್ ಅವರದು. 1938 ರಲ್ಲಿ ಹರಿಪುರದಲ್ಲಿ (ಗುಜರಾತ್ನ ಒಂದು ಹಳ್ಳಿ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ನ ವಾರ್ಷಿಕ ಅಧಿವೇಶನಕ್ಕಾಗಿ ಮಹಾತ್ಮ ಗಾಂಧಿಯವರು ನಂದಲಾಲ್ ಬೋಸ್ ಅವರನ್ನು ಅಲಂಕಾರಕ್ಕಾಗಿ ಕರೆದರು. ಆ ಕಾಲಕ್ಕೆ ಬಂಗಾಲದ ಕಲಾಶಾಲೆ ತನ್ನ ಕಲೆಯಲ್ಲಿ ಭಾರತೀಯ ಹುಡುಕಾಟದ ನಿರಂತರತೆಯಲ್ಲಿದ್ದ ಘಟ್ಟ, ಅತ್ತ ಅಜಂತಾ ಭಿತ್ತಿಚಿತ್ರ ಹಾಗು ಜಪಾನಿನ ಒಕೊಕೊರಾ ಕಾಕೋಜಿ ಸ್ಪೂರ್ತಿಯಿಂದ ಜಪಾನಿನ ವಾಶ್ ಮೆಥಡ್ ನಲ್ಲಿ ರಚಿಸಲಾಗುತ್ತಿದ್ದ ಕಲಾಮಾದರಿಯನ್ನು ಆಧಾರಿಸಿ ನಂದಲಾಲ್ ಬೋಸರು ಕೆಲವು ಚಿತ್ರಗಳ ಮಾದರಿಯನ್ನು ಗಾಂಧೀಜಿಯವರಿಗೆ ತೋರಿಸಿದರು. ಗಾಂಧೀಜಿ ಅವುಗಳನ್ನು ನಿರಾಕರಿಸಿ ಅಪ್ಪಟ ಭಾರತೀಯ ಹಾಗು ಗ್ರಾಮೀಣ ಸೊಗಡು ಪ್ರತಿಧ್ವನಿಸುವ ಚಿತ್ರಗಳು ಬೇಕೆಂದು ಸೂಚಿಸಿದರು. ಮತ್ತು ಅದೇ ಅವರ ಉದ್ದೇಶವೂ ಆಗಿತ್ತು, ನಡುವೆ ಸೃಜನಶೀಲ ಸಂಕ್ಷಿಪ್ತತೆಯು ಸ್ಥಳೀಯ ಸೌಂದರ್ಯವನ್ನು ಪ್ರತಿಬಿಂಬಿಸುವ ಮತ್ತು ಭಾರತದ ಕಲ್ಪನೆಯೊಂದಿಗೆ ಪ್ರತಿಧ್ವನಿಸುವಂತಹದನ್ನು ರಚಿಸಲು ತುಡಿತವೂ ಬೋಸ್ ರಿಗೆ ಇತ್ತು. ಹಲವು ಪ್ರಯತ್ನಗಳ ಬಳಿಕ ನಂದಲಾಲ್ ಬೋಸ್ ಅವರು ಮೊರೆ ಹೋಗಿದ್ದು ಆ ಕಾಲದಲ್ಲಿ ಬಂಗಾಲದ 'ಪಟ್' ಭಿತ್ತಿಚಿತ್ರಗಳ ಆಧಾರಿಸಿ ಮಾಡುತ್ತಿದ್ದ ಜೇಮಿನಿರಾಯ್ ಅವರ ಚಿತ್ರಕೃತಿಗಳು.

ಗಾಢ ವರ್ಣಗಳು ಹಾಗು ದಪ್ಪ ರೇಖಾಚಿತ್ರಗಳ ಮೂಲಕ ನಂದಲಾಲ್ ಬೋಸ್ ಅವರು ಸಮ್ಮೇಳನದ ಭಾಗವಾಗಿ, ನೈಸರ್ಗಿಕ ವರ್ಣದ್ರವ್ಯಗಳನ್ನು ಬಳಸಿ ಕೈಯಿಂದ ಮಾಡಿದ ಕಾಗದದ ಮೇಲೆ ಪೋಸ್ಟರ್ ಗಳನ್ನು ರಚಿಸಿದರು. ಬೇಟೆಗಾರರು, ಸಂಗೀತಗಾರರು, ಗೂಳಿ, ಬಡಗಿ, ಚಮ್ಮಾರ, ನೇಯ್ಗೆ ನಿರತ ಮಹಿಳೆಯರು ಸೇರಿದಂತೆ ಗ್ರಾಮೀಣ ಜೀವನದ ನಿತ್ಯಕಾಣುವ ದೃಶ್ಯಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರಗಳು ಸಮ್ಮೇಳನದಲ್ಲಿ ಪ್ರಮುಖ ಪಾತ್ರವಹಿಸಿದವು ಮತ್ತು ಹರಿಪುರ ಪೋಸ್ಟರ್ಗಳು ಎಂದು ಪ್ರಸಿದ್ಧವಾದವು.

ನಂದಲಾಲ್ ಬೋಸ್ ಅಂತಹ 84 ಪೋಸ್ಟರ್ಗಳನ್ನು ಚಿತ್ರಿಸಿದ್ದಾರೆ ಮತ್ತು ಹೆಚ್ಚಿನದನ್ನು ಅವರ ವಿದ್ಯಾರ್ಥಿಗಳು ಮೇಲ್ವಿಚಾರಣೆಯಲ್ಲಿ ಚಿತ್ರಿಸಿದ್ದಾರೆ. ಐಕಾನಿಕ್ ಪೋಸ್ಟರ್ಗಳು 2019 ರಲ್ಲಿ ಇಂಡಿಯಾ ಪೆವಿಲಿಯನ್ನ ಭಾಗವಾಗಿ ಆರ್ಟ್ ಬಿನಾಲೆಗಾಗಿ ವೆನಿಸ್ಗೆ ಪ್ರಯಾಣ ಬೆಳೆಸಿದವು.

ಈಗ ಇವುಗಳ ಪೈಕಿ 74 ಭಿತ್ತಿಚಿತ್ರಗಳು ಬೆಂಗಳೂರಿನ ಆಧುನಿಕ ಕಲಾಸಂಗ್ರಹಾಲಯ ಗ್ಯಾಲರಿಯಲ್ಲಿ ಪ್ರದರ್ಶಿತಗೊಳ್ಳಲಿವೆ .



ಗಾಂಧಿ
ಮಹಾತ್ಮ ಗಾಂಧಿ...

–ಜಿ ಪಿ ಬಸವರಾಜು

ಅಕ್ಟೋಬರ್ 2 . ಗಾಂಧೀಜಿ ಅವರ ಜನ್ಮ ದಿನ . ಅದು ಭಾರತೀಯರಾದ ನಮ್ಮ ನೆನಪಿನಲ್ಲಿ ಉಳಿಯ ಬೇಕು ಎಂಬ ಕಾರಣಕ್ಕೆ ಅಕ್ಟೋಬರ್ ಎರಡನ್ನು ರಜಾದಿನವಾಗಿ ಘೋಷಿಸಿದ್ದೇವೆ. ಗಾಂಧಿ ಹುಟ್ಟಿದ ದಿನ ಇದು ಎಂಬುದನ್ನು ನೆನಪಿಸಲು ಶಾಲಾ ಕಾಲೇಜುಗಳಲ್ಲಿ ಸಮಾರಂಭಗಳನ್ನು ನಡೆಸುತ್ತೇವೆ. ಗಾಂಧಿಯ ನೆನಪಾಗಿ ಕೆಲವು ಮಾತುಗಳನ್ನು ಹೇಳಿ ಆ ದಿನ ಮುಗಿಯುವುದನ್ನು ನೋಡುತ್ತೇವೆ. ರಜಾ ದಿನದ ಖುಷಿಯಲ್ಲಿ ನಮ್ಮ ಮಕ್ಕಳೂ ಗಾಂಧಿಗೆ ನಮಸ್ಕರಿಸುತ್ತಾರೆ– ಭಕ್ತಿಯಿಂದಲ್ಲ, ಗೌರವದಿಂದಲೂ ಅಲ್ಲ; ಅದೊಂದು ಯಾಂತ್ರಿಕ ಕ್ರಿಯೆ ಎನ್ನುವಂತೆ.; ಇತಿಹಾಸದ ಮರೆಯಬಾರದ ನೆನಪು ಎನ್ನುವಂತೆ.

ಆದರೆ ಜನವರಿ 30ನ್ನು ನಾವು ನಿತ್ಯವೂ ಆಚರಿಸುತ್ತೇವೆ. ಗಾಂಧಿಯನ್ನು ಕೊಂದ ಆ ದಿನ ವರ್ಷದಲ್ಲಿ ಎಷ್ಟು ಸಲ ಮರಳಿ ಮರಳಿ ಬರುತ್ತದೆ? ಇತ್ತೀಚಿನ ರಾಜಕೀಯ ವಿದ್ಯಮಾನಗಳನ್ನು ನೋಡಿದರೆ, ಸಾಮಾಜಿಕ ಸಂಕಷ್ಟಗಳನ್ನು ಗಮನಿಸಿದರೆ, ಸಾಂಸ್ಕೃತಿಕ ಪಲ್ಲಟಗಳನ್ನು ಸೂಕ್ಷ್ಮವಾಗಿ ಪರಿಭಾವಿಸಿದರೆ, ಕೊಲೆ, ಸುಲಿಗೆ , ಹಲ್ಲೆ, ಅಲ್ಪಸಂಖ್ಯಾತರ, ದುರ್ಬಲರ ಮೇಲೆ ನಡೆಯುತ್ತಿರುವ ಅಟ್ಟಹಾಸದ ದಬ್ಬಾಳಿಕೆಗಳನ್ನು ನೋಡಿದರೆ ನಿತ್ಯವೂ ಜನವರಿ 30 ಎದುರಾಗುತ್ತಲೇ ಇರುವುದನ್ನು ಗುರುತಿಸಬಹುದು. ನಾವು ಅಹಿಂಸಾ ನಾಡಿನವರು ಎಂದು ಹೇಳುತ್ತಲೇ ಹಿಂಸೆಯನ್ನು ಆರಾಧಿಸುತ್ತೇವೆ; ವೈಭವೀಕರಿಸುತ್ತೇವೆ; ಹಿಂಸೆಯ ಪಾಲುದಾರರೂ ಆಗುತ್ತವೆ. ಈ ಕಾರಣದಿಂದಾಗಿಯೇ ನಾವು ನಮ್ಮೊಳಗೇ ದ್ವೇಷವನ್ನು ತುಂಬಿಕೊಳ್ಳುತ್ತಾ, ಕಾರಣವಿಲ್ಲದೆ ಎದುರಾಳಿಗಳನ್ನು ರೂಪಿಸಿಕೊಂಡು ಅವರೊಡನೆ ಜಗಳಕ್ಕಿಳಿಯುತ್ತೇವೆ. ಧರ್ಮ ಎನ್ನುವುದು ಕರುಣೆಯ, ಸಹನೆಯ, ಅರಿವಿನ, ಕೂಡಿಬಾಳುವ ಮಾರ್ಗವಾಗದೆ, ನಮ್ಮ ಅಹಂಕಾರದ, ಗರ್ವದ, ಪ್ರತಿಷ್ಠೆಯ, ಹುಸಿನಂಬಿಕೆಯ ದಾರಿಯಾಗಿ ಹಿಂಸೆಗಿಳಿಯುವ ಕಾರಣವೂ ಆಗುತ್ತದೆ. ಎದುರಾಳಿಗಳನ್ನು ಕೊಲ್ಲುವ, ಹಿಂಸಿಸುವ, ತುಳಿಯುವ, ಅಪಮಾನಿಸುವ ಖಡ್ಗವೂ ಆಗಿ ರಕ್ತದ ಹೊಳೆ ಹರಿಯಲು ನೆರವಾಗುತ್ತದೆ.

ವರ್ಷದ 365 ದಿನಗಳೂ ಜನವರಿ ಮೂವತ್ತಾಗಿ ಮಾರ್ಪಾಟಾಗುವ ಸೋಜಿಗ ನಮಗೆ ತಿಳಿಯದಂತೆಯೇ ನಮ್ಮನ್ನು ಸುತ್ತುವರಿದಿರುತ್ತದೆ. ಗಾಂಧೀಜಿಯ ಕಣ್ಣೀರು ನಮಗೆ ಕಾಣುವುದೇ ಇಲ್ಲ. ಗಾಂಧೀ ಬದುಕಿನುದ್ದಕ್ಕೂ ಪಾಲಿಸಿಕೊಂಡ ಬಂದ ಅಹಿಂಸೆ, ಸಹನೆ, ನಂಬಿಕೆಗಳು ನಮ್ಮ ಹತ್ತಿರವೂ ಸುಳಿಯದೆ, ಗೋಡ್ಸೆ ಹರಿಸಿದ ರಕ್ತ, ಅದರ ಬಣ್ಣ ನಮ್ಮೆಲ್ಲರ ಕಣ್ಣು ತುಂಬುವ ಸೋಜಿಗವನ್ನು ನಾವು ನೋಡುತ್ತೇವೆ. ಇದು ವರ್ತಮಾನದ, ನಾವೇ ಸೃಷ್ಟಿಸಿಕೊಂಡಿರುವ ಜಾದೂ!

ಇತಿಹಾಸ ವರ್ತಮಾನಗಳ ವ್ಯತ್ಯಾಸವೇ ತಿಳಿಯದಂಥ ದಾರುಣ ಸನ್ನಿವೇಶದಲ್ಲಿ ನಾವಿದ್ದೇವೆ. ಧಾರ್ಮಿಕ ಬಲಿ ಎನ್ನುವುದು ಪ್ರಾಣ ಹರಣಕ್ಕೆ, ಮುಗ್ಧರ ವಧೆಗೆ ಕಾರಣವಾಗಿರುವ ಚಿತ್ರಗಳೇ ನಮ್ಮ ಕಣ್ಮುಂದೆ ನಿತ್ಯವೂ ಬಿಚ್ಚಿಕೊಳ್ಳುತ್ತಿವೆ.

ಧರ್ಮ ಎನ್ನುವುದು ಗಾಂಧೀಜಿಗೆ ಏನಾಗಿತ್ತು ಎಂಬುದು ನಮಗೆ ಮರೆತುಹೋಗಿದೆ. ಗಾಂಧೀಜಿಯವರಿಗೆ ಧರ್ಮ ಎದೆಯಾಳದ ಅರಿವನ್ನು ತಿಳಿಯುವ ಮಾರ್ಗವಾಗಿತ್ತು. ಮನುಷ್ಯ–ಮನುಷ್ಯರನ್ನು ಗೌರವಿಸುವ, ಪ್ರೀತಿಸುವ, ಪರಸ್ಪರರನ್ನು ಅರ್ಥಮಾಡಿಕೊಳ್ಳುವ ನಂಬಿಕೆಯಾಗಿತ್ತು. ಮನುಷ್ಯರ ಎದೆಯಾಳದ ಪ್ರೀತಿಯ ಸೆಲೆಗಳನ್ನು ಬತ್ತದಂತೆ ಉಳಿಸಿಕೊಳ್ಳುವ ಪ್ರಯತ್ನದಂತೆಯೂ ಕಾಣುತ್ತಿತ್ತು. ಗಾಂಧೀಜಿ ಈ ಸಾರ್ಥಕತೆಯಲ್ಲಿ ಧರ್ಮವನ್ನು ಬಳಸಿದರು.

ಗಾಂಧೀಜಿಯವರ ಪರಿಭಾವನೆಯಲ್ಲಿ ಯಾವ ಧರ್ಮವೂ ದೊಡ್ಡದಲ್ಲ; ಯಾವುದೂ ಸಣ್ಣದಲ್ಲ. ಎಲ್ಲ ಧರ್ಮಗಳೂ ಸಮಾನವಾದವು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸರಿಕಂಡ, ತಾನು ನಂಬಿಕೆಯನ್ನು ಇಟ್ಟುಕೊಳ್ಳುವ ಧರ್ಮವನ್ನು ಪಾಲಿಸಬಹುದು. ಪರಸ್ಪರ ಗೌರವ, ಪ್ರೀತಿ, ಸಹನೆ, ಕರುಣೆಗಳನ್ನು ಇಟ್ಟುಕೊಂಡು ಮಾನವನ ಒಳಿತಿನ ಕಡೆಗೆ ನಡೆಯಬೇಕಾದ ಗುರಿಯೇ ಧರ್ಮದ ಗುರಿಯಾಗಿರುತ್ತದೆ ಎಂಬ ಆಳವಾದ ನಂಬಿಕೆ ಗಾಂಧೀಜಿಯವರಲ್ಲಿತ್ತು. ಎಲ್ಲ ಧರ್ಮಗಳೂ ಮೂಲದಲ್ಲಿ ಶ್ರೇಷ್ಠ ಧರ್ಮಗಳೇ; ನಿಜವಾದ

ಧರ್ಮಗಳೇ. ಅವುಗಳಲ್ಲಿ ಕೊರತೆ, ದೋಷಗಳು ಕಾಣಿಸಿದರೆ ಅದಕ್ಕೆ ಕಾರಣ ಈ ಧರ್ಮಗಳು ಪರಿಪೂರ್ಣರಲ್ಲದ ಮನುಷ್ಯರ ಮೂಲಕ ಬಂದಿರುವುದೇ ಆಗಿದೆ ಎಂದು ಗಾಂಧಿ ತಿಳಿದಿದ್ದರು. ನನ್ನ ಬೆಳವಣಿಗೆಯನ್ನು ಎಲ್ಲಿಯವರೆಗೆ ಕುಬ್ಜಗೊಳಿಸುವುದಿಲ್ಲವೊ, ಅಲ್ಲಿಯವರೆಗೆ ನನ್ನ ಪೂರ್ವಿಕರನ್ನು ಗೌರವಿಸುತ್ತೇನೆ, ಅವರ ಹಣೆಪಟ್ಟಿಯನ್ನು ಇಟ್ಟುಕೊಳ್ಳುತ್ತೇನೆ, ಒಳ್ಳೆಯದು ಎಲ್ಲಿಯೇ ಇರಲಿ ಅದನ್ನು ಪಡೆಯಲು ಎಲ್ಲಿಯವರೆಗೆ ನನ್ನ ಪೂರ್ವಿಕರು ತಡೆಯುವುದಿಲ್ಲವೋ ಅಲ್ಲಿಯವರೆಗೆ ನಾನು ಅವರನ್ನು ಗೌರವಿಸುತ್ತೇನೆ ಎಂದು ಹೇಳುತ್ತಿದ್ದ ಗಾಂಧಿ ತಮ್ಮ ಮನದ ಕಿಟಕಿ ಬಾಗಿಲುಗಳನ್ನು ತೆರೆದು ಒಳ್ಳೆಯದು ಒಳಬರಲು ಅವಕಾಶ ಕಲ್ಪಿಸಿದ್ದರು.

ಬೇರೆಯ ಧರ್ಮಗಳನ್ನು ನಾವು ಗೌರವಿಸಬೇಕೆಂದರೆ ಮೊದಲು ನಮ್ಮ ಧರ್ಮವನ್ನು ಗೌರವಿಸಬೇಕು ಎಂಬ ನಂಬಿಕೆಯಿಂದಲೇ ಅವರು ನಾನು ಹಿಂದೂ ಧರ್ಮದವನು ಎಂದು ಹೇಳುತ್ತಿದ್ದರು. ಹಿಂದೂ ಧರ್ಮದ ಒಳಗಿನವರಾಗಿ ಅದನ್ನು ವಿಮರ್ಶಾತ್ಮಕವಾಗಿ ನೋಡುವ ಹಕ್ಕನ್ನು ಅವರು ಪಡೆದುಕೊಂಡಿದ್ದರು. 'ಅಸ್ಪೃಶ್ಯತೆ ಹಿಂದೂ ಧರ್ಮದ ಭಾಗ ಎನ್ನುವುದಾದರೆ, ಅದು ಕೊಳೆತ ಭಾಗ. ನಾನು ಹಿಂದು ಆಗಿರುವ ಕಾರಣ ನನಗೆ ಅದರ ದೋಷಗಳು ಎದ್ದು ಕಾಣುತ್ತವೆ.'

'ಅಸ್ಪೃಶ್ಯತೆ ಧರ್ಮಸಮ್ಮತವಾದ ಆಚರಣೆಯಲ್ಲ. ಅದು ಹಿಂದೂ ಧರ್ಮಕ್ಕೆ ಮಾತ್ರವಲ್ಲ, ಮಾನವತೆಗೇ ಅಪಚಾರ ಮಾಡುವಂತಹ ಆಚರಣೆ' ಎಂದು ಹೇಳುವ ಧೀರತನವನ್ನೂ ಗಾಂಧೀಜಿ ತೋರಿಸಿದ್ದರು.

ತನ್ನ ಧರ್ಮದಲ್ಲಿ ಆಳವಾದ ನಂಬಿಕೆಯ ಬೇರುಗಳನ್ನು ಉಳಿಸಿಕೊಂಡು ಇತರ ಧರ್ಮಗಳ ಸಂಪರ್ಕವನ್ನು ಇಟ್ಟುಕೊಳ್ಳುವುದು, ಆ ಧರ್ಮಗಳನ್ನು ಗೌರವಿಸುವುದು, ಸಹನೆಯಿಂದ ನೋಡುವುದನ್ನು ಗಾಂಧೀಜಿ ಒಪ್ಪುತ್ತಿದ್ದರು. ತಾವು ಕೂಡಾ ಹಾಗೆಯೇ ನಡೆದುಕೊಂಡರು. ಇಂಥ ನಡೆ ತನ್ನ ಧರ್ಮಕ್ಕೆ ಮಾಡುವ ಅನ್ಯಾಯವಲ್ಲ ಎಂದು ಅವರು ಹೇಳುತ್ತಿದ್ದರು.

ಏಸುಕ್ರಿಸ್ತನ ಬಗ್ಗೆ ಮತ್ತು ಕ್ರಿಶ್ಚಿಯನ್ ಧರ್ಮದ ಬಗ್ಗೆ ಗಾಂಧೀಜಿಗೆ ವಿಶೇಷ ಒಲವಿತ್ತು. ಅದಕ್ಕೆ ಕಾರಣ ಏಸುವಿನ ವ್ಯಕ್ತಿತ್ವ. ಆದರೆ ಏಸುವನ್ನು ದೇವಪುತ್ರ ಎಂಬುದನ್ನು ಅವರು ಒಪ್ಪುತ್ತಿರಲಿಲ್ಲ. ಏಸು ದೇವಪುತ್ರನಾದರೆ ಪ್ರತಿಯೊಬ್ಬ ಮನುಷ್ಯನೂ ದೇವಪುತ್ರನೇ ಎಂದು ಹೇಳುತ್ತಿದ್ದರು. ಮನುಷ್ಯರೆಲ್ಲರೂ ಸಮಾನರು ಎಂಬ ತತ್ವ ಅವರದು. ಏಸುವಿನ ಕರುಣೆ, ಸಹನೆ ಮತ್ತು ಮಾನವೀಯ ಗುಣಗಳನ್ನು ಬಿಚ್ಚುಮನಸ್ಸಿನಿಂದ ಮೆಚ್ಚುತ್ತಿದ್ದ ಗಾಂಧೀಜಿ, ಏಸು ಕೇವಲ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವನಲ್ಲ, ಅವನು ಇಡೀ ಜಗತ್ತಿಗೇ ಸೇರಿದವನು; ಅವನನ್ನು ಒಂದು ಧರ್ಮಕ್ಕೆ ಕಟ್ಟಿಹಾಕಿ ಸೀಮಿತಗೊಳಿಸಬಾರದು ಎಂದು ಹೇಳುತ್ತಿದ್ದರು.

ಗಾಂಧೀಜಿಯವರಿಗೆ ರಾಮ ಪ್ರಿಯನಾದವನು. ತಮ್ಮ ಎದೆಗೆ ಗುಂಡು ಬಿದ್ದು, ಪ್ರಾಣಬಿಡುವಾಗಲೂ ಗಾಂಧೀಜಿ 'ಹೇ ರಾಮ್' ಎಂದು ಹೇಳುತ್ತಲೇ ಪ್ರಾಣಬಿಟ್ಟದ್ದು ಇತಿಹಾಸ. ಆದರೆ ಇವತ್ತಿನ ವರ್ತಮಾನದಲ್ಲಿ ರಾಮ ಬೇಕಾಬಿಟ್ಟಿಯಾಗಿ ಬಿಕರಿಯಾಗುತ್ತಿದ್ದಾನೆ; ವಿರೂಪಗೊಳ್ಳುತ್ತಿದ್ದಾನೆ. ರಾಮನ ಎತ್ತರವನ್ನು ಇಳಿಸಿ ಇಳಿಸಿ ತೀರ ಕುಬ್ಜನನ್ನಾಗಿ ಮಾಡಲಾಗಿದೆ. ಇನ್ನೊಂದು ಧರ್ಮವನ್ನು ದ್ವೇಷಿಸುವ, ಅನ್ಯಧರ್ಮೀಯರ ಮೇಲೆ ಯುದ್ಧಸಾರಿ ಅವರನ್ನು



ನಿರ್ನಾಮ ಮಾಡುವ ವ್ಯಕ್ತಿಯನ್ನಾಗಿಯೂ ರಾಮನನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ರಾಮನ ಹೆಸರಿನಲ್ಲಿ 'ರಾಮಸೇನೆ'ಯನ್ನು ಕಟ್ಟಲಾಗಿದೆ. ಕೊಲೆ, ಸುಲಿಗೆ, ದರ್ಪ, ಹಿಂಸೆ ಎಲ್ಲದಕ್ಕೂ ರಾಮ ಒಂದು ಸಂಕೇತ ಎಂಬಂತೆ ಚಿತ್ರಿಸಲಾಗಿದೆ ಮತ್ತು ಬಳಸಲಾಗುತ್ತಿದೆ.

ಗಾಂಧೀಜಿಯವರ ಪೂಜ್ಯ ರಾಮನನ್ನು ನಾವು ಎಲ್ಲಿಗೆ ಎಳೆದುತಂದು ನಿಲ್ಲಿಸಿದ್ದೇವೆ. ಈಗಿನ ರಾಮ ರಕ್ತಸಿಕ್ತ ರಾಮ; ಹಿಂಸೆಯನ್ನು ವೈಭವೀಕರಿಸುವ ಪ್ರತೀಕವಾಗಿ ರಾಮನನ್ನು ನಾವು ಎತ್ತಿ ನಿಲ್ಲಿಸಿದ್ದೇವೆ. ಇಂಥ ರಾಮನನ್ನು ಆರಾಧಿಸುತ್ತಲೇ ಗಾಂಧೀಜಿಯನ್ನು ಕೊಲ್ಲುತ್ತಿದ್ದೇವೆ. ಈ ಎಚ್ಚರವೂ ನಮಗಿಲ್ಲ ಎಂಬುದು ಗಾಂಧೀ ನಾಡಿನ ದೊಡ್ಡ ದುರಂತ.

ಗಾಂಧೀಜಿ 'ರಾಮರಾಜ್ಯ'ದ ಕಲ್ಪನೆಯನ್ನು ಬಿಚ್ಚಿಡುತ್ತಿದ್ದ ರೀತಿಯೇ ಸೆಳೆಯುವಂತಿದೆ: ರಾಮರಾಜ್ಯ ಎನ್ನುವುದು ಪ್ರತ್ಯೇಕ ಪದವೂ ಅಲ್ಲ; ಅದು ದೇವ ಪ್ರಭುತ್ವವೂ ಅಲ್ಲ. ನ್ಯಾಯಬದ್ಧವಾದ, ಮಾನವೀಯವಾದ, ಭೂಮಿಯ ಮೇಲೆ ದೇವರನ್ನು ಸಾಧ್ಯಮಾಡಿಕೊಳ್ಳುವ ಸರ್ಕಾರ ಮತ್ತು ಸಮಾಜವೇ ರಾಮರಾಜ್ಯ. ರಾಮರಾಜ್ಯ ಎಂದರೆ ಹಿಂದೂಗಳ ಆಡಳಿತವಲ್ಲ. ಹಲವು ಧಾರ್ಮಿಕ ನಂಬಿಕೆಗಳನ್ನು ಒಳಗೊಳ್ಳುವ ಪ್ರಭುತ್ವ. ಖುದಾ ಅಥವಾ ದೇವರಿಗೆ ಇರುವ ಇನ್ನೊಂದು ಹೆಸರೇ ನನ್ನ ರಾಮ. ಖುದಾರಾಜ್ಯ ಅಂದರೆ ಭೂಮಿಯ ಮೇಲಿನ ದೇವರ ರಾಜ್ಯ. ಅದು ಪರಿಪೂರ್ಣ ಪ್ರಜಾಪ್ರಭುತ್ವ.

ಈ ಪರಿಪೂರ್ಣ ಪ್ರಜಾಪ್ರಭುತ್ವದಲ್ಲಿ ಯಾವುದೇ ರೀತಿಯ ತಾರತಮ್ಯಗಳು ಇರುವುದಿಲ್ಲ. ಉಳ್ಳವರು, ಇಲ್ಲದವರು, ಬಣ್ಣ, ಜನಾಂಗ, ಧಾರ್ಮಿಕ ನಂಬಿಕೆ, ಲಿಂಗ ಮೊದಲಾದವನ್ನು ಆಧರಿಸಿದ ಅಸಮಾನತೆಗಳು, ಯಾವುದೇ ತಾರತಮ್ಯಗಳು ಇರುವುದಿಲ್ಲ ಎನ್ನುವ ಬಲವಾದ ನಂಬಿಕೆಯ ಮೇಲೆ ಖುದಾ ರಾಜ್ಯವನ್ನು ಗಾಂಧೀಜಿ ಅರ್ಥೈಸುತ್ತಿದ್ದರು,

ಇತರ ನಂಬಿಕೆಗಳನ್ನು, ಧರ್ಮಗ್ರಂಥಗಳನ್ನು ಟೀಕಿಸುವುದಾಗಲಿ ಅಥವಾ ಅವುಗಳಲ್ಲಿನ ದೋಷಗಳನ್ನು

ಹುಡುಕಿ ಹೇಳುವುದು ನನ್ನ ಕೆಲಸವಲ್ಲ. ಆದರೆ ಹಿಂದೂಧರ್ಮದಲ್ಲಿನ ದೋಷಗಳನ್ನು, ಕೊರತೆಗಳನ್ನು ಎತ್ತಿ ತೋರಿಸಿ ಅವುಗಳನ್ನು ಶುದ್ಧೀಕರಿಸುವುದು ನನ್ನ ಹಕ್ಕು ಮತ್ತು ನನ್ನ ಕರ್ತವ್ಯ– ಎಂದೂ ಗಾಂಧೀಜಿ ನಂಬಿಕೊಂಡಿದ್ದರು.

ಧರ್ಮ ಎನ್ನುವುದನ್ನು ಇವತ್ತು ಬಲಿದಾನದ ಜೊತೆ ಬೆರಸಿ ಅದರ ಅರ್ಥವನ್ನು ತಿರುಚಲಾಗಿದೆ. ಬಲಿದಾನ ತನ್ನನ್ನು ತಾನು ಕೊಟ್ಟುಕೊಳ್ಳುವುದರ ಬದಲು ಅನ್ಯರನ್ನು, ತನ್ನ ಧರ್ಮವನ್ನು ಒಪ್ಪದ, ಬೇರೊಂದು ಧಾರ್ಮಿಕ ನಂಬಿಕೆಯನ್ನು ಇಟ್ಟುಕೊಂಡವರನ್ನು ಕೊಲ್ಲಲು ಪಡೆದುಕೊಂಡ ಪರವಾನಗಿಯಂತೆ ಬಲಿದಾನವನ್ನು ಅರ್ಥೈಸಿ ಮುಗ್ಧರನ್ನು ದಾರಿ ತಪ್ಪಿಸಲಾಗುತ್ತಿದೆ. ಅನ್ಯ ಧರ್ಮೀಯರನ್ನು ಕೊಲ್ಲುವುದು ಬಲಿದಾನವಾಗಿ, ಧಾರ್ಮಿಕ ಕ್ರಿಯೆಯಾಗಿ ಮಾರ್ಪಟ್ಟಿರುವುದು ಎಂಥ ಘೋರ!

ಸತ್ಯ ಮತ್ತು ಅಹಿಂಸೆಯನ್ನು ಗಾಂಧೀಜಿ ಬೇರೆ ಬೇರೆಯಾಗಿ ನೋಡಲೇ ಇಲ್ಲ. ಇವೆರಡೂ ಪರಸ್ಪರ ಪೂರಕವಾದವು. ಚಿಂತನೆ, ನಡೆ–ನುಡಿಗಳಲ್ಲಿ ನಾವು ಸಂಪೂರ್ಣವಾಗಿ ಅಹಿಂಸಾತ್ಮಕವಾಗಿ ಇಲ್ಲವಾದರೆ ನಾವೆಂದೂ ಬಲಿಷ್ಠರಾಗಲು ಸಾಧ್ಯವಿಲ್ಲ ಎಂದು ಅವರು ಹೇಳುತ್ತಿದ್ದರು. ಗಾಂಧೀಜಿಯವರ ಏಕಾದಶ (ಹನ್ನೊಂದು) ವ್ರತದಲ್ಲಿ ಸತ್ಯ ಮತ್ತು ಅಹಿಂಸೆ ಮುಖ್ಯವಾದವು. ಅಸ್ಪೃಶ್ಯತಾ ನಿವಾರಣೆ, ಶರೀರ ಶ್ರಮ, ಸಹಿಷ್ಣುತೆ, ಸರ್ವಧರ್ಮ ಸಮಭಾವ ಮೊದಲಾದವೂ ಈ ವ್ರತದಲ್ಲಿ ಸೇರಿದ್ದವು. ರಕ್ತಸಿಕ್ತವಾದ ಪಶುಬಲದ ಹೊರಾಟವನ್ನು ಎದುರಿಸಲು ಸಾಧ್ಯವಾಗುವ ಹೋರಾಟವೆಂದರೆ ಸತ್ಯ ಮತ್ತು ಅಹಿಂಸೆಯನ್ನು ಆಧರಿಸಿದ ಹೋರಾಟ ಎಂಬ ನಂಬಿಕೆಯ ಮೇಲೇ ಅವರ ಪ್ರತಿರೋಧಗಳು, ಹೋರಾಟಗಳು ರೂಪಿತವಾಗುತ್ತಿದ್ದವು.

ಗಾಂಧೀಜಿಗೆ ತಾನು ಹಿಂಸೆಯ ಪರವಾಗಿರಬಹುದೆಂಬ ಅನುಮಾನವಿತ್ತು; ಈ ಬಗ್ಗೆ ದೊಡ್ಡ ಅಳುಕೂ ಇತ್ತು. ಜಾಗತಿಕ ಯುದ್ಧಗಳಲ್ಲಿ ತಾವು ವಹಿಸಿದ ಪಾತ್ರವನ್ನು ಅವರು ನೆನಪಿಸುತ್ತಿದ್ದರು. ಪಾತ್ರ ಎಂಥದೇ ಆಗಿರಲಿ, ಯುದ್ಧವನ್ನು ಬೆಂಬಲಿಸುವ ನಿಲುವನ್ನು ತಾವು ತಳೆದದ್ದು ಸತ್ಯ ಎಂದು ಅವರು



ಭಾವಿಸಿದ್ದರು. ಇದು ಹಿಂಸೆಯನ್ನು ಬಯಸುವ ಮನಸ್ಸಿನ ನಿರ್ಧಾರವೆಂದೇ ಅವರು ಹೇಳುತ್ತಿದ್ದರು.

ಸತ್ಯ ಗಾಂಧೀಜಿಯವರ ಬದುಕಿನಲ್ಲಿ ಹೇಗೆ ಬೇರೆಯಿತು ಎಂಬುದನ್ನು ಅವರ ಬಾಲ್ಯದ ಒಂದು ಸಂಗತಿಯೇ ಹೇಳುತ್ತದೆ. ಅವರು ಸತ್ಯ ಹರಿಶ್ಚಂದ್ರನಿಂದ ಪ್ರಭಾವಿತವಾದ ಕತೆ ಎಲ್ಲರಿಗೂ ತಿಳಿದಿದೆ. ಅಹಿಂಸೆ ಗಾಂಧೀಜಿಯವರನ್ನು ಆವರಿಸಿದ್ದು ಹೇಗೆ? ಇದಕ್ಕೆ ಗಾಂಧೀಜಿಯವರೇ ಉತ್ತರವನ್ನು ಹೇಳಿದ್ದಾರೆ: ನಾನು ಹುಟ್ಟಿದ್ದು ಗುಜರಾತಿನಲ್ಲಿ. ಗುಜರಾತ್ನಲ್ಲಿ ಜೈನಧರ್ಮದ ಅಗಾಧವಾದ ಪ್ರಭಾವ ಇತ್ತು. ಜೈನಧರ್ಮ ಎಂದರೆ ಅದು ಅಹಿಂಸಾ ತತ್ವದ ಮೇಲೆ ನಿಂತ ಧರ್ಮ ಹೀಗಾಗಿ ಅಹಿಂಸಾ ತತ್ವ ನನ್ನ ಮೇಲೆ ಗಾಢ ಪ್ರಭಾವ ಬೀರಿದೆ.


ಅಹಿಂಸೆಯ ಮಾರ್ಗವನ್ನು ಗಾಂಧೀಜಿ ಎಂದೂ ಹೇಡಿತನದ ಮಾರ್ಗ ಎಂದು ತಿಳಿದಿರಲಿಲ್ಲ. ಹೋರಾಟ ಮಾರ್ಗದಲ್ಲಿ ಅಹಿಂಸೆ ಎನ್ನುವುದು ಪ್ರಬಲವಾದ ಶಕ್ತಿ. ತನ್ನ ನ್ಯಾಯಬದ್ಧ, ಹೋರಾಟದಲ್ಲಿ ಅಹಿಂಸಾವಾದಿ ಗಾಯಗೊಳ್ಳಬಹುದು, ಸಾಯಲೂ ಬಹುದು. ಅಂಥವನು ಧೀರ; ಹೇಡಿಯಲ್ಲ. ತನ್ನ ಕರ್ತವ್ಯವನ್ನು ನಿಭಾಯಿಸಬೇಕಾದ ವ್ಯಕ್ತಿ, ಎದುರಾಳಿಯನ್ನು ಎದುರಿಸುವ ಹೊತ್ತಲ್ಲಿ, ಅಪಾಯವನ್ನು ಕಂಡ ಕ್ಷಣದಲ್ಲಿ ಪಲಾಯನ ಮಾಡುವುದಾದರೆ ಅವನು ಹೇಡಿಯಾಗುತ್ತಾನೆ, ಧೀರನಾಗುವುದಿಲ್ಲ. ಅಂಥವನು ಮನುಷ್ಯರಲ್ಲಿ ಮತ್ತು ದೇವರಲ್ಲಿ ಇಟ್ಟ ನಂಬಿಕೆಯನ್ನು ಕಳೆದುಕೊಂಡಂತೆ. ಅಹಿಂಸಾ ಮಾರ್ಗ ಧೀರ ನಡೆಯ ನೇರ ಹಾದಿ.

ಗಾಂಧೀಜಿ ತಮ್ಮ ಬದುಕಿನಲ್ಲಿ ಮೈತುಂಬ ಬಟ್ಟೆ ಹೊದ್ದುಕೊಳ್ಳಲಿಲ್ಲ. ದಕ್ಷಿಣ ಆಫ್ರಿಕಾದ ಯಶಸ್ವೀ ಹೋರಾಟದ ನಂತರ ಗಾಂಧೀಜಿ ಭಾರತಕ್ಕೆ ಮರಳಿ ಬಂದಾಗ (1915) ಅವರ ಉಡುಗೆ ಸರಳವಾಗಿದ್ದರೂ ಪೂರ್ಣವಾಗಿತ್ತು: ಹತ್ತಿಯಲ್ಲಿ ನೇಯ್ದ ಉದ್ದನೆಯ ಬಿಳಿ ನಿಲುವಂಗಿ, ಧೋತಿ, ಕಾಠೇವಾಡಿಯ ಪೇಟ. ಆದರೆ ಮುಂದೆ ಭಾರತ ಯಾತ್ರೆಯನ್ನು ಕೈಗೊಂಡ ಹೊತ್ತಿಗೆ ಈ ಉಡುಗೆ, ಹತ್ತಿಯ ಪಂಚೆ ಮತ್ತು ಅಂಗಿಗಳ ಮಟ್ಟಕ್ಕೆ ಇಳಿಯಿತು. ಇನ್ನೂ ಮುಂದಿನ ಹಂತದಲ್ಲಿ ಅವರು ಪಂಚೆಯನ್ನು ಮಾತ್ರ ಉಳಿಸಿಕೊಂಡು ಅರೆಬೆತ್ತಲೆಯಲ್ಲಿಯೇ ಉಳಿದದ್ದು ಇತಿಹಾಸವಾಯಿತು.

ದುಂಡು ಮೇಜಿನ ಪರಿಷತ್ತಿನಲ್ಲಿ ಮಾತುಕತೆಗಾಗಿ ಭಾರತದ ಪ್ರತಿನಿಧಿಯಾಗಿ ಹೋದಾಗಲೂ ಅವರು ತಮ್ಮ ವಸ್ತ್ರ ಸಂಹಿತೆಯನ್ನು ಮೀರಲಿಲ್ಲ. ವಿಪರೀತ ಚಳಿ ಇದ್ದ ಇಂಗ್ಲೆಂಡಿನಲ್ಲಿ, ಅಲ್ಲಿನ ದೊರೆ ಐದನೇ ಜಾರ್ಜ್ ಏರ್ಪಡಿಸಿದ್ದ ಚಹಾಕೂಟದಲ್ಲಿ ಭಾಗವಹಿಸಿದ್ದಾಗಲೂ ಗಾಂದೀಜಿ ತಮ್ಮ ಎಂದಿನ ಉಡುಗೆಯಲ್ಲಿಯೇ ಇದ್ದರು; ಅಷ್ಟೇ ಬಟ್ಟೆಯಲ್ಲಿದ್ದರು.

ಆದರೆ ಅವರು ಜೀವನ ಪೂರ್ತಿ ಸತ್ಯ, ಧರ್ಮ, ಅಹಿಂಸೆಯ ಬಟ್ಟೆಗಳನ್ನು ಪೂರ್ಣ ಪ್ರಮಾಣದಲ್ಲಿ ಹೊದ್ದುಕೊಂಡಿದ್ದರು; ಬೆಚ್ಚಗಿದ್ದರು; ಸುರಕ್ಷಿತವಾಗಿದ್ದರು. ಹೀಗಾಗಿಯೇ ಅವರು ಯಾವ ಹೊತ್ತಿನಲ್ಲಿಯೂ ಹೇಡಿಯಾಗಿ ವರ್ತಿಸಲಿಲ್ಲ; ತಮ್ಮ ಜೀವಿತದ ಕೊನೆಯ ಕ್ಷಣದಲ್ಲಿಯೂ ದೀರನಾಗಿಯೇ ಗುಂಡಿಗೂ ಎದೆಕೊಟ್ಟರು. ಅದು ಧರ್ಮದ ಮಾರ್ಗ; ಬಲಿದಾನದ ಮಾರ್ಗ; ಅಹಿಂಸೆಯ ಮಾರ್ಗ. ಇಡೀ ಜಗತ್ತಿಗೆ ಆದರ್ಶವಾದ ಗಾಂಧೀಮಾರ್ಗ.

(ಕೃಪೆ : ಅನ್ವೇಷಣೆ ಸಾಹಿತ್ಯ ಪತ್ರಿಕೆ ಮತ್ತು 'ಅವಧಿ' ಜಾಲತಾಣ ಪತ್ರಿಕೆ)





ಹುಬ್ಬಳ್ಳಿಯಲ್ಲಿ ಗಾಂಧೀಜಿ ಮತ್ತು ಸಿದ್ಧಾರೂಢ ಸ್ವಾಮಿ ಭೇಟಿ ..

ನವಂಬರ್ 11–11–1920. 103 ವರ್ಷಗಳ ಹಿಂದೆ ಇದೇ ದಿನ ಹುಬ್ಬಳ್ಳಿಗೆ ಭೇಟಿ ನೀಡಿದ್ದ ಮಹಾತ್ಮ ಗಾಂಧೀಜಿಯವರು ಸದ್ಗುರು ಪೂಜ್ಯ ಶ್ರೀ ಸಿದ್ಧಾರೂಢರನ್ನು ಭೇಟಿಯಾದರು .

ಹುಬ್ಬಳ್ಳಿಯಲ್ಲಿ ಈಗಿರುವ ಸಿದ್ಧಾರೂಢ ಮಠದಲ್ಲಿ ಅವರನ್ನು ಭೇಟಿಯಾಗಿ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ನಾನು ಸನ್ಯಾಸಿಯಾದರೇನು ನನಗೆ ದೇಶ ಬೇಡವೆ ? ನನಗೂ ಖಾದಿ ತೊಡಿಸಿ ಎಂದು ಸದ್ಗುರು ಸಿದ್ಧಾರೂಢರು. ಗಾಂಧೀಜಿಯವರಿಗೆ ಕೇಳಿ ಕೊಂಡರು. ಗಾಂಧೀಜಿಯವರು ಸದ್ಗುರುಗಳಿಗೆ ಸ್ವದೇಶಿ ಸಂಕೇತವಾದ ಖಾದಿ ಹೊದಿಸಿ ಗೌರವಿಸಿದರು.

ಈ ವೇಳೆ ಮಹಾತ್ಮ ಗಾಂಧೀಜಿಯವರು ಸದ್ಗುರು ಸಿದ್ಧಾರೂಢರವರು ತೋರಿದ ಆತ್ಮೀಯ ಸದ್ಭಾವನೆಗಳಿಗೆ ಮಾರು ಹೋದರು . ಪ್ರಸಾದ ಆತಿಥ್ಯ ಮತ್ತು ಸದ್ಗುರುಗಳ ಆಶೀರ್ವಾದವನ್ನು ಸಂತೋಷದಿಂದ ಸ್ವೀಕರಿಸಿದ ಮಹಾತ್ಮರು ನಂತರ ಕೊಪ್ಪೀಕರ್ ರಸ್ತೆಯಲ್ಲಿರುವ ಸಂಯುಕ್ತ ಕರ್ನಾಟಕ ಕಚೇರಿಯ ಮಗ್ಗಲಿಗಿರುವ ವಿಶಾಲವಾದ ಜಾಗದಲ್ಲಿ ಸಾರ್ವಜನಿಕ ಸಭೆಯಲ್ಲಿ ಅಪಾರ ಜನಸಮೂಹವನ್ನುದ್ದೇಶಿಸಿ ಒಂದು ಗಂಟೆ ಮಾತನಾಡಿದರು. ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಕನ್ನಡ ಮತ್ತು ಹಿಂದಿಯಲ್ಲಿ ಸುಮಾರು 45 ನಿಮಿಷಗಳ ಕಾಲ ಆಶೀರ್ವಚನ ನೀಡಿದರು. ಇದರಿಂದ ಸಾಕಷ್ಟು ಸಂಖ್ಯೆಯಲ್ಲಿ ಸಾಮಾನ್ಯ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರೇರಣೆಯಾಯಿತು.ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ವಿಚಾರದಲ್ಲಿ ಇದೊಂದು ಹುಬ್ಬಳ್ಳಿಯಲ್ಲಿ ನಡೆದ ಚರಿತ್ರಾರ್ಹ ಅಧ್ಯಾಯವಾಗಿದೆ.

ಸಂಗ್ರಹ : ರವೀಂದ್ರನಾಥ ದೊಡ್ಡಮೇಟಿ



FORGOTTEN INCIDENTS OF INDIAN FREEDOM STRUGGLE IN KARNATAKA

- Dr. B. S.Srikanta

The Indian Independence Movement, as all of us are aware, was a series of historic events whose ultimate aim was to end British rule in India and secure freedom for the country. The freedom struggle initiated by leaders like Naoroji, Gokhale, Ranade, Tilak and others, spanned over a period of ninety years from 1857 to 1947. The freedom that we are enjoying today is the result of struggle and sacrifices of thousands of our countrymen.

Whenever we talk or write about the Indian Freedom Struggle, we mention only national level movements like Salt Satyagraha (Dandi March), Quit India Movement and others which are well documented and very much in public memory. We should understand that not only national level movements strengthened India's struggle for freedom but many regional level movements also played significant role in shaping our country's freedom struggle. But unfortunately, they have faded away from public memory. In this article, I am trying to narrate some of the forgotten incidents of Indian Freedom Struggle in Karnataka. It is befitting to reminisce these events to know the sacrifices made by unsung heroes.

Eachalu Marada Chaluvali

(Toddy Tree Movement)

This movement took place at Turuvanuru, a remote village in Chitradurga district of Karnataka. With this movement, the village became a centre of activities during the freedom struggle. In 1939, Mahatma Gandhi gave a call for prohibition of liquor in the country. In response to Gandhi'scall, a group of about 70 to 80 villagers which included women resorted to cutting toddy trees in and around Turuvanuru village. True Gandhian Late Sri. S. Nijalingappa led this movement. He was arrested and imprisoned for about one and a half year. Later on, he became the Chief Minister of Karnataka. The movement which lasted for several months caught the attention of Mahatma Gandhi. His personal secretary Sri Mahadeva Desai, visited the village in 1942, appreciated the stand taken by the villagers and extended support to the agitation. The act of felling toddy trees resulted in stoppage of arrack production (Arrack is extracted from these trees) and caused huge revenue loss to the government. The Mysore king imposed Pundu Kandaya on the village but the villagers refused to pay tax and became a significant part of the "no tax campaign ". Though this movement was of a smaller magnitude, it resulted in consolidation of people'svoice against the British rule and strengthened people's resolve to drive away the British from our country. A bronze statue of Mahatma Gandhi was installed in the village in 1948 as a mark of respect to the memory of the Father of Nation.

Salt Satyagraha of Ankola

Mahatma Gandhi's historic Dandi March which took place between 12th March and 6th



April 1930, inspired many freedom fighters all over the country. It may not be out of place if I mention here that Sri Mailara Mahadevappa from Haveri district was the lone representative from Karnataka who accompanied Gandhi on the Dandi March. Congress leaders in Karnataka also decided to stage Satyagraha in Karnataka.

A meeting was held at Dharwad to select a place for staging Salt Satyagraha. A committee consisting of Sri R.R.Diwakar, Sri Karnad Sadashiva Rao and Sri.Hanumantha Rao Koujalagi was constituted to select a place for "Uppina Satyagraha". The committee selected Ankola, a town located on the Arabian coast in Uttara Kannada district. On April 13, 1930 about 40,000 people under the leadership of Sri M.P.Nadkarni gathered at Poojigeri, a place near Ankola and broke the salt rule by making salt. Several leaders which included Sri N.S.Hardikar, Sri Govinda Nayaka and others participated in the agitation. The villagers brought salt from the sea shore in earthern pots and sold in the town without paying any kind of tax to the British government. It is documented that the Satyagraha went on for six weeks despite the arrest of the leaders by the British police.

Dwaja Satyagraha of Shivapura

British rule in India had banned hoisting of the tricolour flag (saffron, white and green with spinning wheel at the centre) in the country. As a mark of defiance against the British imposed restrictions on civil freedom, hoisting of tricolour flag was a common occurrence and witnessed enthusiastic participation from people all over the country. The Flag Satyagraha occurred in Nagpur and Jabalpur in 1923. Apart from these incidents, notable Flag Satyagrahas were organised in our state of Karnataka in 1938, one at Shivapura and the other at Viduraswatha.

The first conference of Mysore Congress (Earlier Karnataka was known as Mysore State) was held in 1938 at Shivapura,near Maddur in Mandya district. It was resolved in the conference to organise Flag Satyagraha and hoist tricolour flag in the farm land belonging to Sri. Thirumale Gowda.The then Deputy Commissioner of the district warned the people against hoisting of tricolour flag. Instead, the Deputy Commissioner suggested to hoist Gandaberunda Flag, the royal emblem of Wadiyar dynasty. Mysore Congress President Sri. T Siddalingaiah was to hoist the flag on April 9th, 1938.About ten thousand people including women assembled at the farm land belonging to Sri. Thirumale Gowda. The flag post which was actually a 60 foot tall arecanut tree was well guarded by women members. When Sri. T.Siddalingaiah was about to hoist the flag, the police arrested him. Sri.M.N Jois, another leader who was there by the side of Siddalingaiah pulled the string and hoisted the flag. Thus the objective of the event was accomplished right under the nose of the British police. The police arrested all the leaders who participated in the agitation. The flag hoisting ceremony lasted for several days and large number of people travelled to Shivapura to see the flag.The incident is known as Shivapura Dwaja Satyagraha. Satyagraha Soudha was constructed tocommemorate the Shivapura Dwaja Satyagraha of 1938 with the initiative undertaken by Sri Kengal Hanumanthaiah, Former Chief Minister of Karnataka. The Soudha was declared open on 26th September 1979. It is located





Left: Huchuraayappa, a freedom fighter from Issuru Village, Karnataka. Right: A stone engraving with the names of those who sacrificed their lives. (Source: Naveed Mulki/@mohsinstats)

adjacent to the Bengaluru – Mysuru highway and the magnificent monument can be seen by everyone travelling on the highway. But it is reported that the Soudha is poorly maintained and has lost the glory due to government's apathy.

Esuru Agitation – First Village to Self-Declare Freedom from the British Rule.

Esuru is a hamlet in Shikaripura taluk of Shivamogga district of Karnataka. It is located at about 50km from the district headquarters. Though Esuru is a non-descript village, it has created indelible mark in the annals of the freedom struggle. In 1942, the year of Quit India Movement, Esuru village created history in the country. It is the first village in Karnataka to self-declare independence and having a parallel government.

In 1942, the residents of the village refused to pay land revenue as the agriculturists of the village suffered huge loss due to natural calamity. The villagers vehemently resisted the intimidatory strategies of the British and fought against the British police with courage and determination. The revolutionaries assembled at Veerabhadreswara Temple to discuss about the strategies for their struggle. The villagers had completely barred the British officials from entering the village. All the roads leading to Esuru village were fenced. They hoisted the tricolour flag on the top of the Veerabhadreswara shrine on September 29th, 1942 and boldly declared the village "Free from the British Raj" by putting up a board which read "Swaraj Sarakara". When British officials tried to enter the village, villagers strongly opposed their entry which led to riot that resulted in the killing of two revenue officials and injuring many villagers. In order to reclaim the village, police troops were sent to the village by British government. The rebellion had serious consequences on the Esuru village. Hundreds of villagers were imprisoned and five youth were hanged. The Britishers wanted to crush the rebellion completely thereby teach villagers a lesson. When the villagers came to know about the impending attack on them by the British, they hid in a nearby forest leaving behind women, children and aged people in the village. As empty streets greeted the British force, they became furious and unleashed violence on women, children and elders. After the independence, all the freedom fighters were released and they were given a grand reception by the people of Shivamogga district. A memorial for freedom fighters has been built at Esuru village. The memorial is in ruins again due to government's apathy.

As narrated, there are several such incidents in which commoners participated with intense patriotic fervour and many sacrificed their lives. On the occasion of Azadi ka Amrit Mahostav, we shall all pay sincere tributes to the memory of thousands of country men, unsung heroes, who sacrificed their lives for the sake of the nation. ■



ಸ್ವಾತಂತ್ರ್ಯ ಹೋರಾಟದ ಮಮತಾಮಯಿ

ಉಮಾಬಾಯಿ ಕುಂದಾಪುರ

–ಮಂಜುನಾಥ್ ಚಾಂದ್.

ತನ್ನ ಹದಿಮೂರನೇ ವಯಸ್ಸಿನಲ್ಲಿ ಮದುವೆ, 25ನೇ ವಯಸ್ಸಿಗೆ ವೈಧವ್ಯ, 29ನೇ ವಯಸ್ಸಿಗೆ ಸ್ವಾತಂತ್ರ್ಯ ಹೋರಾಟ, 30ನೇ ವಯಸ್ಸಿಗೆ ಸೇವಾದಳದ ನಾಯಕಿ ಪಟ್ಟ, ನಲವತ್ತನೇ ವಯಸ್ಸಿಗೆ ಜೈಲು ಶಿಕ್ಷೆ, ಬ್ರಿಟಿಷರಿಂದ ಚಿತ್ರಹಿಂಸೆ, ಭೂಗತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರಿಗೆ ತನ್ನ ಮನೆಯಲ್ಲೇ ಆಶ್ರಯ, ಭಗಿನಿ ಸಮಾಜ ನಿರ್ಮಾಣ ಸ್ವಾತಂತ್ರ್ಯಾ ನಂತರ ಸರ್ಕಾರ ನೀಡಲು ಮುಂದೆ ಬಂದ ಎಲ್ಲ ಹುದ್ದೆ, ಗೌರವ ಕೊಡುಗೆಗಳನ್ನು ಧಿಕ್ಕರಿಸಿ ಸರಳ ಜೀವನ .

ನೂರು ವರ್ಷಗಳ ಪರಿಪೂರ್ಣ ಜೀವನವನ್ನು ಅನುಭವಿಸಿದ ಉಮಾಬಾಯಿ ಕುಂದಾಪುರ ಎಂಬ ದಿಟ್ಟ ಮಹಿಳೆ ಬದುಕಿದ ರೀತಿಯಿದು. ಸಹನಾಮಯಿ ಉಮಾಬಾಯಿ ಅವರು ತಾನು ಜನಿಸಿದ ಭರತ ಭೂಮಿಗೆ ಸಲ್ಲಿಸಿದ ನಿಸ್ವಾರ್ಥ ಸೇವೆಯಿದು

ಉಮಾಬಾಯಿ ಅವರ ಜನ್ಮನಾಮ ಭವಾನಿ ಗೋಳಿಕೇರಿ. ಮೂಲತಃ ಮಂಗಳೂರಿನವರಾದ ಕೃಷ್ಣರಾವ್ ಮತ್ತು ಜುಂಗಾಬಾಯಿ ಅವರ ಮಗಳಾದ ಭವಾನಿ ತಮ್ಮ 13ನೇ ವಯಸ್ಸಿನಲ್ಲಿ ಮದುವೆಯಾಗಿದ್ದು ಕುಂದಾಪುರದ ಸಂಜೀವ್ ರಾವ್ ಅವರನ್ನು. ಅಲ್ಲಿಂದ ಬಳಿಕ ಅವರು ಉಮಾಬಾಯಿಯಾಗಿ ಬದಲಾದರು.

ಮದುವೆಯ ಬಳಿಕ ಮುಂಬೈಗೆ ತೆರಳಿದ ಅವರಿಗೆ ಒಬ್ಬರು ಗಾಡ್ ಫಾದರ್ ಸಿಕ್ಕಿದರು. ಅವರು ಇನ್ನಾರೂ ಅಲ್ಲ, ಉಮಾ ಅವರ ಮಾವ ಆನಂದ ರಾವ್. ಆ ಹೊತ್ತಿಗೆ ಸಮಾಜ ಸುಧಾರಣೆ, ಮಹಿಳಾ ಸಬಲೀಕರಣದಲ್ಲಿ ಬಲವಾದ ನಂಬಿಕೆಯನ್ನು ಹೊಂದಿದ್ದ ಅವರು ಮುಂಬೈನಲ್ಲಿ 'ಗೌಂಡ್–ದೇವಿ ಮಹಿಳಾ ಸಮಾಜ'ವನ್ನು ಸ್ಥಾಪಿಸಿದ್ದರು. ಆಗ ಆನಂದ ರಾವ್ ಅವರಿಗೆ ತಮ್ಮ ಕನಸುಗಳನ್ನು ಸಾಕಾರಗೊಳಿಸಲು ಸಿಕ್ಕವರು ಅವರ ಸೊಸೆ ಉಮಾ. ಆಕೆಗೆ ಸಂಪೂರ್ಣ ಬೆಂಗಾವಲಾಗಿ, ಪ್ರೇರಕಶಕ್ತಿಯಾಗಿ ನಿಂತ ಅವರು, ಆಕೆಗೆ ಮುಂದಿನ ಶಿಕ್ಷಣವನ್ನು ಪಡೆಯಲು ಸಾಧ್ಯವಿರುವ ಎಲ್ಲ ಸಹಕಾರವನ್ನು ನೀಡಿದರು. ಮೆಟ್ರಿಕ್ಯುಲೇಷನ್ ಮುಗಿಸಿದ ತಕ್ಷಣ ಉಮಾ ಮಹಿಳೆಯರಿಗೆ ಶಿಕ್ಷಣ ನೀಡುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

1920 ಅವರ ಜೀವನದ ಬಹುದೊಡ್ಡ ತಿರುವು. ಆ ವರ್ಷದ ಆಗಸ್ಟ್ ತಿಂಗಳ ಮೊದಲ ದಿನವೇ ಮುಂಬೈನಲ್ಲಿ ನಿಧನರಾದ ಲೋಕಮಾನ್ಯ ಬಾಲಗಂಗಾಧರ್ ತಿಲಕ್ ಅವರ ಅಂತಿಮ ಯಾತ್ರೆಯ ಬೃಹತ್ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಅವಕಾಶ. ಅಪ್ರತಿಮ ದೇಶಪ್ರೇಮಿ ತಿಲಕರಿಗೆ ಅಂತಿಮ ವಿದಾಯವನ್ನು ಕೋರಲು ಅಂದು ಮುಂಬೈನಲ್ಲಿ ಸೇರಿದ್ದ ಜನಸಾಗರವನ್ನು ಕಂಡು ಅವರು ನಿಬ್ಬೆರಗಾಗಿ ಹೋಗುತ್ತಾರೆ. ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದ ಮೆರವಣಿಗೆಯದು. ಕೆಲವೇ ಕೆಲವು ಪೊಲೀಸರು. ಆ ಜನಸ್ತೋಮ, ಕಾಂಗ್ರೆಸ್ ಕಾರ್ಯಕರ್ತರು, ಸ್ವಯಂಸೇವಕರು ಎಲ್ಲವನ್ನೂ ಕರಾರುವಕ್ಕಾಗಿ ಸಂಘಟಿಸಿದ ರೀತಿಗೆ ಮಾರುಹೋದ ಉಮಾಬಾಯಿ ಆ ಕ್ಷಣದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಲು ನಿರ್ಧರಿಸಿ ಬಿಡುತ್ತಾರೆ. ಮರುದಿನದಿಂದಲೇ ಖಾದಿ ಸೀರೆಯನ್ನು ತೊಡಲು ಶುರು ಮಾಡುತ್ತಾರೆ. 'ಸ್ವದೇಶಿ' ಎಂಬ ನಾಟಕವನ್ನು ಬರೆದು ಸ್ವತಃ ಅದರಲ್ಲಿ ಅಭಿನಯಿಸುತ್ತಾರೆ. ಮನೆ ಮನೆಗೆ ತೆರಳಿ ಮಹಿಳಾ ಸ್ವಯಂಸೇವಕರನ್ನು ನೇಮಕ ಮಾಡಿದರು. ಚಳವಳಿಯಲ್ಲಿ ಧುಮುಕುವಂತೆ ಉತ್ತೇಜನ ನೀಡುತ್ತಾರೆ.

ಇಂತಹ ಹೊತ್ತಿನಲ್ಲೇ ಅವರ ಪತಿ ಸಂಜೀವ ರಾವ್ ಕ್ಷಯರೋಗಕ್ಕೆ ಬಲಿಯಾಗುತ್ತಾರೆ. ಮಗನನ್ನು ಕಳೆದುಕೊಂಡ ಆನಂದ ರಾವ್ ಕುಗ್ಗಿಹೋಗುತ್ತಾರೆ. ಆದರೆ ದೃತಿಗೆಡುವ ಸಂದರ್ಭ ಅದಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಸೊಸೆಯನ್ನು ಸಂತೈಸುವ ಹೊಣೆಯನ್ನು

ಅವರು ನಿಭಾಯಿಸುತ್ತಾರೆ. ಉಮಾಬಾಯಿ ಕುಗ್ಗದಂತೆ ಆಕೆಯ ಬೆಂಬಲಕ್ಕೆ ನಿಲ್ಲುತ್ತಾರೆ. ಇಂತಹ ಸ್ಥಿತಿಯಲ್ಲಿ ಮುಂಬೈನಲ್ಲಿ ಬಹಳ ಕಾಲ ಕಳೆಯುವುದು ಅವರಿಗೆ ಸಾಧ್ಯವಾಗುವುದಿಲ್ಲ. ಮುಂಬೈನಿಂದ ಹುಬ್ಬಳ್ಳಿಗೆ ಬಂದ ಆನಂದ ರಾವ್ ಅಲ್ಲಿ ಕರ್ನಾಟಕ ಪ್ರೆಸ್ ಆರಂಭಿಸಿದರು. ಅದರ ಆವರಣದಲ್ಲಿಯೇ ಹೆಣ್ಣುಮಕ್ಕಳಿಗಾಗಿಯೇ 'ತಿಲಕ್ ಕನ್ಯಾ ಶಾಲೆ'ಯನ್ನು ಆರಂಭಿಸಿ ಅದರ ಸಂಪೂರ್ಣ ಹೊಣೆಯನ್ನು ಸೊಸೆ ಉಮಾಬಾಯಿ ಅವರಿಗೆ ವಹಿಸುತ್ತಾರೆ.

ಆ ಹೊತ್ತಿಗೆ (1921) ಅಮೇರಿಕದಲ್ಲಿ ವೈದ್ಯ ವೃತ್ತಿಯಲ್ಲಿ ತೊಡಗಿದ್ದ ಡಾ.ಎನ್.ಎಸ್.ಹರ್ಡಿಕರ್ ಅವರು ಭಾರತಕ್ಕೆ ಮರಳಿ ಬರುತ್ತಾರೆ. ಯುವಕರನ್ನು ಸಂಘಟಿಸುವ ಏಕೈಕ ಉದ್ದೇಶದಿಂದ ಹಿಂದೂ ಸೇವಾದಳವನ್ನು ಆರಂಭಿಸುತ್ತಾರೆ. ಹುಬ್ಬಳ್ಳಿ–ಧಾರವಾಡ ಸೇವಾದಳದ ಮುಖ್ಯ ಕೇಂದ್ರವಾಗುತ್ತದೆ. ದೇಶದ ನಾನಾ ಭಾಗಗಳ ಯುವಕರು ಹುಬ್ಬಳಿಗೆ ಬಂದು ತರಬೇತಿ ಪಡೆಯಲು ಆರಂಭಿಸುತ್ತಾರೆ. ಉಮಾಬಾಯಿ ಈ ಸೇವಾದಳದ ಮಹಿಳಾ ಘಟಕದ ನಾಯಕಿಯಾಗಿ ನೇಮಕ ಹೊಂದುತ್ತಾರೆ. ಅಲ್ಲಿಂದ ಮುಂದೆ ಅವರಿಗೆ ಬಿಡುವಿಲ್ಲದ ಕೆಲಸ. ಸಾರ್ವಜನಿಕ ಬದುಕಿನಲ್ಲಿ ಅವರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ.

ಮುಂದಿನ ಮೂರೇ ವರ್ಷಗಳಲ್ಲಿ, ಅಂದರೆ 1924ರಲ್ಲಿ ಬೆಳಗಾವಿಯಲ್ಲಿ ಗಾಂಧಿ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನ. ಅದೊಂದು ಐತಿಹಾಸಿಕ ಕಾರ್ಯಕ್ರಮ. ಆ ಅಧಿವೇಶನದ ಸಂಘಟನೆಯ ಹೊಣೆ ಹರ್ಡಿಕರ್ ಮತ್ತು ಉಮಾಬಾಯಿ ಹೆಗಲಿಗೆ. ಇದನ್ನು ದೊಡ್ಡ ಸವಾಲಾಗಿ ಸ್ವೀಕರಿಸಿದ ಉಮಾ ಅವರು, ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ 150ಕ್ಕೂ ಅಧಿಕ ಮಹಿಳಾ ಸ್ವಯಂಸೇವಕರನ್ನು ನೇಮಕ ಮಾಡುತ್ತಾರೆ. ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದವರು ವಿಧವೆಯರು ಎನ್ನುವುದು ವಿಶೇಷ. ಇಡೀ ದೇಶದಲ್ಲಿ ಈ ಪ್ರಮಾಣದಲ್ಲಿ ಮಹಿಳಾ ಸ್ವಯಂಸೇವಕರನ್ನು ನೇಮಕ ಮಾಡಿದ್ದು ಅದೇ ಮೊದಲು. ಮಿದು ಮಾತಿನ, ಆದರೆ ಕಠಿಣ ನಿಲುವಿನ ಉಮಾಬಾಯಿ ಅವರು ಈ ಮೂಲಕ ತಮ್ಮ ಸಂಘಟನಾ ಚಾತುರ್ಯವನ್ನು ಸಾಬೀತು ಮಾಡಿಬಿಡುತ್ತಾರೆ.



ಮುಂಬೈನಲ್ಲಿ ನಡೆದ ತಿಲಕರ ಅಂತಿಮಯಾತ್ರೆಯಲ್ಲಿ ಸೇರಿದ ಜನಸಾಗರ

ಬೆಳಗಾವಿ ಅಧಿವೇಶನದ ಬಳಿಕ ಅವರ ಸ್ವಾತಂತ್ರ್ಯ ಹೋರಾಟ ಇನ್ನಷ್ಟು ತೀವ್ರಗೊಳ್ಳುತ್ತದೆ. ಉಮಾಬಾಯಿ ಅವರ ಹಿಂದೆ ಬಹುದೊಡ್ಡ ಮಹಿಳಾ ಸೈನ್ಯವೇ ಬಂದು ನಿಲ್ಲುತ್ತದೆ. ಪ್ರತಿಭಟನೆ, ಸತ್ಯಾಗ್ರಹ ನಿರಂತರವಾದಾಗ 1932ರಲ್ಲಿ ಉಮಾಬಾಯಿ ಅವರನ್ನು ಬಂಧಿಸಿ ಯರವಾಡ ಜೈಲಿಗೆ ತಳ್ಳುತ್ತಾರೆ ಪೊಲೀಸರು. ಇಂತಹ ಸಂದಿಗ್ಧ ಸ್ಥಿತಿಯಲ್ಲಿದ್ದಾಗಲೇ ಅವರ ಮಾವ ಆನಂದ ರಾವ್ ನಿಧನರಾಗುತ್ತಾರೆ. ಆದರೆ, ಜೀವನದ ಎಲ್ಲ ಔನತ್ಯಕ್ಕೆ ಕಾರಣರಾದ ಮಾವ ನಿಧನರಾದ ಸುದ್ದಿ ಅವರನ್ನು ತಲುಪಿದಾಗ ವಾರವೇ ಕಳೆದು ಹೋಗಿತ್ತು. ಹಾಗಿದ್ದೂ ಪೊಲೀಸರು ಅವರನ್ನು ಜೈಲಿನಿಂದ ಬಿಡುಗಡೆ ಮಾಡಲು ಸುತಾರಾಂ ಒಪ್ಪಲಿಲ್ಲ. ಬದಲಾಗಿ, ಆನಂದ ರಾವ್ ನಡೆಸಿಕೊಂಡು ಬರುತ್ತಿದ್ದ ಕರ್ನಾಟಕ ಪ್ರೆಸ್ ಮತ್ತು ಹೆಣ್ಣುಮಕ್ಕಳ ಶಾಲೆಗೆ ಬೀಗ ಜಡಿಯುತ್ತಾರೆ. ಉಮಾಬಾಯಿ ಅವರೇ ನಡೆಸುತ್ತಿದ್ದ ಮಹಿಳಾ ಸಂಘಟನೆ 'ಭಗಿನಿ ಮಂಡಲ'ವನ್ನು ಕಾನೂನು ಬಾಹಿರ ಎಂದು ಘೋಷಿಸಲಾಗುತ್ತದೆ. ಅಂತಿಮವಾಗಿ ಜೈಲು ಶಿಕ್ಷೆಯನ್ನು ಮುಗಿಸಿ ಹೊರಬಂದ ಉಮಾಬಾಯಿ ಅವರಿಗೆ ಇದ್ದುದು ಹುಬ್ಬಳ್ಳಿಯಲ್ಲಿ ಚಿಕ್ಕದೊಂದು ಮನೆ ಮಾತ್ರ. ಆದರೆ ಅವರು ಕಿಂಚಿತ್ತೂ ಎದೆಗುಂದುವುದಿಲ್ಲ. ಎಲ್ಲವನ್ನೂ ನಿರ್ಲಿಪ್ತವಾದ ಮನಸ್ಸಿನಿಂದ ಎದುರಿಸುತ್ತಾರೆ.

ಬಂಧನದ ಅವಧಿ ಮುಗಿದು ಹೊರಬಂದವರಿಗೆ ವಿಶ್ರಮಿಸಲು ಸಮಯವೇ ಇರಲಿಲ್ಲ. ಆ ಹೊತ್ತಿನಲ್ಲಿ ಕರನಿರಾಕರಣೆ ಮತ್ತು ಉಪ್ಪಿನ ಸತ್ಯಾಗ್ರಹ ಉಗ್ರ ಸ್ವರೂಪವನ್ನು ಪಡೆದುಕೊಂಡಿತ್ತು. ದೇಶದ ಮೂಲೆ ಮೂಲೆಯಲ್ಲಿ ಪ್ರತಿಭಟನೆಗಳು ನಿತ್ಯದ ಮಾತಾಗಿತ್ತು. ಪೊಲೀಸರು ಸತ್ಯಾಗ್ರಹಿಗಳನ್ನು ಮನಬಂದಂತೆ ಥಳಿಸುತ್ತಿದ್ದರು, ಹಿಡಿದು ಜೈಲಿಗೆ ಅಟ್ಟುತ್ತಿದ್ದರು. ಇವರಲ್ಲಿ ಬಹುತೇಕರು ಮಹಿಳಾ ಸೇವಾದಳದ ಕಾರ್ಯಕರ್ತರು. ಜೈಲಿನಿಂದ ಬಿಡುಗಡೆಯಾಗಿ ಹೊರಬರುತ್ತಿದ್ದ ಅಷ್ಟೂ ಮಂದಿಗೆ ಆಶ್ರಯ ಒದಗಿಸಿ, ಊಟ, ತಿಂಡಿ ನೀಡಿ ಅಮ್ಮನಂತೆ ಆರೈಕೆ ಮಾಡಿದ್ದು ಇದೇ ಸಹನಾಮಯಿ ಉಮಾಬಾಯಿ ಅವರು. ಇಷ್ಟು ಮಾತ್ರವಲ್ಲದೆ ಅನೇಕ ಮಂದಿಗೆ ಮರಳಿ ಊರಿಗೆ ತೆರಳಲು ಹಣದ ಸಹಾಯ ಮಾಡಿದವರು ಉಮಾ. ಇವರಲ್ಲಿ ಬಹಳ ಮಂದಿ ಟಾಂಗವಾಲಾಗಳೂ ಇದ್ದರು. ಇಂತಹ ನೂರಾರು ಕಾರ್ಯಕರ್ತರ ಪಾಲಿಗೆ ಉಮಾ ಮಮತಾಮಯಿಯಾಗಿದ್ದರು.

1934ರ ಜನವರಿ 15ರಂದು ಬಿಹಾರದಲ್ಲಿ ಬರಸಿಡಿಲಿನಂತೆ ಎರಗಿದ್ದು ಭೂಕಂಪ. ಮೊದಲೇ ಹಿಂದುಳಿದ ರಾಜ್ಯ ಎಂಬ ಪಟ್ಟ ಪಡೆದಿದ್ದ ಬಿಹಾರ ಈ ಪ್ರಾಕೃತಿಕ ವಿಕೋಪದಿಂದ ತತ್ತರಿಸಿ ಹೋಗುತ್ತದೆ. ಸುಮಾರು ಹನ್ನೆರಡು ಸಾವಿರ ಮಂದಿ ಸಾವನ್ನಪ್ಪುತ್ತಾರೆ. ಲಕ್ಷಾಂತರ ಜನ ನಿರಾಶ್ರಿತರಾಗುತ್ತಾರೆ. ಅನೇಕ ನಗರಗಳೇ ನಿರ್ನಾಮವಾಗುತ್ತವೆ. ಇಂತಹ ಕೆಟ್ಟ ಸನ್ನಿವೇಶದಲ್ಲಿ ತಮ್ಮ ಮಹಿಳಾ ಸ್ವಯಂಸೇವಕರ ದಂಡಿನೊಂದಿಗೆ ಸ್ವಯಂಪ್ರೇರಣೆಯಿಂದ ಬಿಹಾರಕ್ಕೆ ■



ಉಮಾಬಾಯಿ ಕುಂದಾಪುರ ಅವರ ಕುಟುಂಬ

ಧಾವಿಸಿದ ಉಮಾಬಾಯಿ ಆ ಜನರ ಕಣ್ಣೀರು ಒರೆಸುವ ಕಾರ್ಯದಲ್ಲಿ ತೊಡಗುತ್ತಾರೆ. ಹಗಲಿರುಳೂ ದಣಿವರಿಯದೇ ಸೇವೆ ಸಲ್ಲಿಸುತ್ತಾರೆ. ಇವರ ನಿಸ್ವಾರ್ಥ ಸೇವೆಯನ್ನು ಕಂಡು ರಾಷ್ಟ್ರೀಯ ನಾಯಕರಾದ ರಾಜೇಂದ್ರ ಪ್ರಸಾದ್ ಮತ್ತು ಆಚಾರ್ಯ ಕೃಪಲಾನಿ ಅವರು ನಿಜಕ್ಕೂ ಬೆರಗಾಗುತ್ತಾರೆ.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬ್ರಿಟಿಷ್ ಅಧಿಕಾರಿಗಳು, ಪೊಲೀಸರು ಸತ್ಯಾಗ್ರಹಿಗಳನ್ನು ಕಂಡರೆ ಉರಿದುಬೀಳುತ್ತಿದ್ದರು. ನಿರ್ದಯವಾಗಿ ದಂಡಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ತಲೆತಪ್ಪಿಸಿಕೊಂಡು ತಿರುಗುತ್ತಿದ್ದ ಅನೇಕ ಮಂದಿ ಕಾರ್ಯಕರ್ತರಿಗೆ ಅಮ್ಮನಂತೆ ತುತ್ತು ತಿನ್ನಿಸಿದವರು ಉಮಾಬಾಯಿ. ಸ್ವಾತಂತ್ರ್ಯ ಬರುವುದಕ್ಕೆ ಒಂದು ವರ್ಷ ಮೊದಲು ಗಾಂಧೀಜಿ ಅವರು ಸ್ಥಾಪಿಸಿದ ಕಸ್ತೂರ್ಬಾ ಟ್ರಸ್ಟಿನ ಕರ್ನಾಟಕ ಶಾಖೆಗೆ ಉಮಾ ಅವರನ್ನು ಪ್ರತಿನಿಧಿಯಾಗಿ ನೇಮಕ ಮಾಡಲಾಗುತ್ತದೆ. ಆರೋಗ್ಯ ಕಾರ್ಯಕ್ರಮಗಳು, ಮಕ್ಕಳ ಕಲ್ಯಾಣ, ವಯಸ್ಕ ಶಿಕ್ಷಣದಂತಹ ಕಾರ್ಯಕ್ರಮಗಳಲ್ಲಿ ಗ್ರಾಮ ಸೇವಕರಿಗೆ ತರಬೇತಿ ನೀಡಿ ಗ್ರಾಮೀಣ ಅಭಿವೃದ್ಧಿಗೆ ಸಹಕರಿಸುವುದು ಈ ಟ್ರಸ್ಟಿನ ಮುಖ್ಯ ಉದ್ದೇಶವಾಗಿತ್ತು. ಆದರೆ ಇಂತಹ ಸಂಘಟನೆಗೆ ಸರ್ಕಾರದಿಂದ ಯಾವುದೇ ಬಿಡಿಗಾಸೂ ಸಿಗುತ್ತಿರಲಿಲ್ಲ. ಇದನ್ನೊಂದು ಸವಾಲಾಗಿ ಸ್ವೀಕರಿಸಿದ ಉಮಾಬಾಯಿ ಅವರು ಅಕ್ಷರಶಃ ಭಿಕ್ಷೆ ಬೇಡಿ ನಿಧಿ ಸಂಗ್ರಹ ಮಾಡುತ್ತಾರೆ. ಮೊದಲು ನಿರ್ಗತಿಕರು, ಅನಾಥರು, ಯುವವಿಧವೆಯರು, ಅವಿವಾಹಿತ ಅನಾಥರು ಮತ್ತು ಇತರ ನತದೃಷ್ಟ ಮಹಿಳೆಯರನ್ನು ನೇಮಕ ಮಾಡಿಕೊಳ್ಳುತ್ತಾರೆ. ಅವರಿಗೆ ಬದುಕನ್ನು ನೀಡುವ ಕಲೆ, ಕರಕುಶಲ ಕಲೆಗಳ ತರಬೇತಿ ನೀಡುತ್ತಾರೆ. ಅವರ ಜೀವನೋದ್ಧಾರಕ್ಕೆ ಕಾರಣರಾಗುತ್ತಾರೆ. ಆ ಕಾಲದಲ್ಲಿ ಉಮಾಬಾಯಿ ಅವರು ಮಹಿಳೆಯರ ಪಾಲಿಗೆ ನಿಜವಾದ ಕಣ್ಮಣಿಯಾಗಿದ್ದರು ಎಂದರೆ ಅತಿಶಯೋಕ್ತಿಯಲ್ಲ.


ದೇಶ ಸ್ವಾತಂತ್ರ್ಯ ಗಳಿಸಿದ ಬಳಿಕ ಅನೇಕ ಪ್ರಶಸ್ತಿ–ಪುರಸ್ಕಾರ, ಹುದ್ದೆ, ಸೌಲಭ್ಯ ಎಲ್ಲವೂ ಅವರನ್ನು ಹುಡುಕಿಕೊಂಡು ಬಂದವು. ಸ್ವಾತಂತ್ರ್ಯ ಹೋರಾಟಗಾರರನ್ನು ಗೌರವಿಸುವ ತಾಮ್ರಪತ್ರಗಳನ್ನು ಕೂಡ ಉಮಾ ತಿರಸ್ಕರಿಸಿದರು. ಪಿಂಚಣಿಯೂ ಬೇಡವೆಂದರು. ಹುಬ್ಬಳ್ಳಿಯಲ್ಲಿ ತಮ್ಮ ಮಾವನ ಸ್ಮರಣಾರ್ಥ ನಿರ್ಮಿಸಿದ 'ಆನಂದ ಸ್ಮೃತಿ' ಎನ್ನುವ ಸಣ್ಣ ಕುಟೀರದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದ ಉಮಾಬಾಯಿ ಅವರು ಬದುಕಿದ್ದು ಭರ್ತಿ ನೂರು ವರ್ಷ (1892–1992). ಉಮಾಬಾಯಿ ಮೂಲತಃ ಮಂಗಳೂರಿನವರಾಗಿ ಹುಬ್ಬಳ್ಳಿಯಲ್ಲಿ ತಮ್ಮ ಜೀವನದ ಸಾರ್ಥಕ್ಯವನ್ನು ಕಂಡರೂ ಕೂಡ ಅವರು ಕುಂದಾಪುರದ ಸೊಸೆ ಎಂಬ ಹೆಮ್ಮೆ ನಮ್ಮದು.

(ಕರ್ನಾಟಕ ಸಾಹಿತ್ಯ ಅಕಾಡೆಮಿಯವರು "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಮಾಲಿಕೆಯಲ್ಲಿ ಪ್ರಕಟಿಸಿದ ಬಸರೂರು–ಕುಂದಾಪುರ ಕೃತಿಯಲ್ಲಿ ಪ್ರಕಟವಾದ ಬರಹ)

■

"ವಿಶ್ವದ ಅರಣ್ಯಗಳಿಗೆ ನಾವೇನು ಮಾಡುತ್ತೀವಿ ಎಂಬುದು ನಾವು ನಮಗೇನು ಮಾಡಿಕೊಳ್ಳುತ್ತೀವಿ ಮತ್ತು ಪರಸ್ಪರ ಒಬ್ಬರಿಗೊಬ್ಬರು ಏನು ಮಾಡಿಕೊಳ್ಳುತ್ತಿದ್ದೀವಿ ಎಂಬುದರ ಪ್ರತಿಬಿಂಬ."

~ ಮಹಾತ್ಮ ಗಾಂಧಿ







ಪ್ರೀತಿ ಸಹಬಾಳ್ವೆಯ ಯಾತ್ರೆ ರಾಷ್ಟ್ರೀಯ ಸಾಂಸ್ಕೃತಿಕ ಜಾಥಾ

ಢಾಯಿ ಆಖರ್ ಪ್ರೇಮ್ ಎಂಬ ಕಬೀರ ವಚನದ ಧ್ಯೇಯದೊಂದಿಗೆ ಎಲ್ಲಾ ರಾಜ್ಯಗಳಲ್ಲಿ ತಲಾ ಒಂದು ವಾರದಂತೆ ಭಗತ್ ಸಿಂಗ್ ಜನ್ಮದಿನ ಸೆ 28ರಿಂದ ಗಾಂಧಿ ಹುತಾತ್ಮ ದಿನ ಜ 30ರವರೆಗೆ ನಡೆಯುತ್ತಿರುವ ರಾಷ್ಟ್ರೀಯ ಸಾಂಸ್ಕೃತಿಕ ಜಾಥಾದ ಕರ್ನಾಟಕದ ಯಾತ್ರೆ ಡಿಸೆಂಬರ್ 2 ರಿಂದ ಮಂಗಳೂರಿನಲ್ಲಿ ಆರಂಭಗೊಂಡು ಡಿ7ರಂದು ಕೇರಳದ ಮಂಜೇಶ್ವರದಲ್ಲಿರುವ ಕನ್ನಡದ ಮೊದಲ ರಾಷ್ಟ್ರಕವಿ ಗೋವಿಂದ ಪೈಗಳ ನಿವಾಸ-ಸ್ಮಾರಕ ಗಿಳಿವಿಂಡುವಿನಲ್ಲಿ ಸಮಾರೋಪಗೊಂಡಿತು.

ಈ ಯಾತ್ರೆಗೆ ಢಾಯಿ ಆಖರ್ ಪ್ರೇಮ್ ಜೊತೆಗೆ ನಮ್ಮೂರಿನ ನುಡಿ ಪತ್ತಪ್ಪೆ ಜೋಕುಲು ಒಂಜೇ ಮಟ್ಟೆಲ್ಡ್ – ಹತ್ತು ತಾಯಂದಿರ ಮಕ್ಕಳು ಒಂದೇ ಮಡಿಲಲ್ಲಿ – ಎಂಬುದನ್ನೂ ಘೋಷಣೆಯಾಗಿ ಬಳಸಿಕೊಳ್ಳಲಾಗಿದೆ . ಮಂಗಳೂರು ನಗರದಲ್ಲಿ ಡಿಸೆಂಬರ್ 2 ರ ಬೆಳಗ್ಗೆ 9ರಿಂದ ರಾತ್ರಿ ಸುಮಾರು 8ರವರೆಗೆ ಎಡೆಬಿಡದೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ದಲಿತೋದ್ಧಾರಕ ಶ್ರೀ ಕುದ್ಮುಲ್ ರಂಗರಾಯರ ಸಮಾಧಿ ಸ್ಥಳ ಬಾಬುಗುಡ್ಡೆಯಲ್ಲಿ ಅವರಿಗೆ ಪುಷ್ಪ ನಮನ ಹಾಗೂ ನುಡಿನಮನಗಳ ಮೂಲಕ ಉದ್ಘಾಟಿಸಲ್ಪಟ್ಟ ಯಾತ್ರೆಯಲ್ಲಿ ನಂತರ ಮಿಷನ್ ಕಂಪೌಂಡ್ ನಲ್ಲಿರುವ ರೆ ಕಿಟ್ಟೆಲ್ ಹಾಗೂ ರೆ ಮೊಗ್ಲಿಂಗ್ ಅವರ ಸ್ಮಾರಕಗಳಲ್ಲಿ ಗೌರವಾರ್ಪಣೆ ಮಾಡಲಾಯಿತು. ಆ ಬಳಿಕ ಕಾರ್ನಾಡ್ ಸದಾಶಿವ ರಾಯರು ಸ್ಥಾಪಿಸಿದ್ದ, ಈಗ ನೆಲಸಮಗೊಳ್ಳಹೊರಟಿರುವ ಮಹಿಳಾ ಸಭಾದಲ್ಲಿ ಪಾರಂಪರಿಕ ಸ್ಥಳಗಳ ರಕ್ಷಣೆಗಾಗಿ ಊರಿನ ಚಿತ್ರ ಕಲಾವಿದರಿಂದ ಚಿತ್ರ ರಚನೆ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ ನುಡಿನಮನಗಳಾದವು. ಬಳಿಕ ಅಲ್ಲಿಯೇ ಸಮೀಪದ ಟಾಗೋರ್ ಪಾರ್ಕಿನಲ್ಲಿರುವ ಮಹಾತ್ಮ ಗಾಂಧಿ ಪ್ರತಿಷ್ಠಾನದ ಆಶ್ರಯದಲ್ಲಿ ಶ್ರೀ ಅರವಿಂದ ಚೊಕ್ಕಾಡಿಯವರು ಕಾರ್ನಾಡ್ ಸದಾಶಿವ ರಾಯರನ್ನು ಸ್ಮರಿಸಿ ಮಾತಾಡಿದ್ದಾಯಿತು. ಮಧ್ಯಾಹ್ನಕ್ಕೆ ರಥಬೀದಿಯ ವೆಂಕಟರಮಣ ದೇವಳದೆದುರು ದೇಶದ ಸ್ವಾತಂತ್ರ್ಯ ಚಳುವಳಿ ಹಾಗೂ ದೇಶ ನಿರ್ಮಾಣದಲ್ಲಿ ಮಹತ್ತರ ಕೊಡುಗೆ ನೀಡಿದ ಸಾರಸ್ವತ ನಾಯಕರಿಗೆ ಗೌರವಾರ್ಪಣೆ, ಬಳಿಕ ಸಾರಸ್ವತರ ವಿಶಿಷ್ಠ ತಿನಿಸುಗಳ ಭೋಜನ ನಡೆಯಿತು. ಅಲ್ಲಿಂದ ಮೀನುಗಾರಿಕಾ ಬಂದರು-ಮಾರುಕಟ್ಟೆಯಲ್ಲಿ ಜನಸಂವಾದ ನಡೆಯಿತು. ಸಂಜೆ 4.30ಕ್ಕೆ ಕುದ್ರೋಳಿಯ ಗೋಕರ್ಣನಾಥೇಶ್ವರ ದೇವಳದಲ್ಲಿ ಶ್ರೀ ಇಮ್ತಿಯಾಜ್ ಸುಲ್ತಾನ್ ಅವರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು, ಬಳಿಕ ಟಿಪ್ಪು ಕಟ್ಟಿಸಿದ್ದ ಸುಲ್ತಾನ್ ಬತ್ತೇರಿಯಲ್ಲಿ ಸಂಜೆ 5.30ಕ್ಕೆ ಕರಾವಳಿ ಲೇಖಕಿಯರ, ವಾಚಕಿಯರ ಸಂಘದವರು ಏರ್ಪಡಿಸಿದ್ದ ರಾಣಿ ಅಬ್ಬಕ್ಕ ನಮನ ಹಾಗೂ ಕಾವ್ಯವಾಚನ ನಡೆಯಿತು. ಅದರಾಚೆಗೆ ಅರಬಿ ಕಡಲಿನಲ್ಲಿ ಸೂರ್ಯಾಸ್ತವಾಗುತ್ತಿದ್ದಂತೆ ತಣ್ಣೀರುಬಾವಿ ಕಡಲ ಕಿನಾರೆಯಲ್ಲಿ ಕರಾವಳಿ ಬ್ಯಾರಿ ಕಲಾವಿದರ ಒಕ್ಕೂಟದ ಸಹಯೋಗದಲ್ಲಿ ಊರಿನ ಎಲ್ಲ ಮತಗಳ ಕಲಾವಿದರಿಂದ ಸೌಹಾರ್ದ ಗಾನ ಸಂಗೀತ ಕಾರ್ಯಕ್ರಮವು ಎರಡು ಗಂಟೆಗೂ ಮೀರಿ ನಡೆಯಿತು.

ಈ ಎಲ್ಲಾ ಕಾರ್ಯಕ್ರಮಗಳನ್ನು ಎಲ್ಲರೂ ಅತ್ಯುತ್ಸಾಹದಿಂದ, ಸ್ವಯಂಪ್ರೇರಣೆಯಿಂದ ತಮ್ಮ ತಮ್ಮದೇ ಖರ್ಚಿನಿಂದ ಸಂಘಟಿಸಿದ್ದರು ಎನ್ನುವುದು ಅತ್ಯಂತ ಮಹತ್ವದ ಹಾಗೂ ಸಂತಸದ ವಿಷಯವಾಗಿದೆ. ಮಂಗಳೂರಿನ ಜನರು ಊರಿನ ಸಾಮರಸ್ಯ, ಸೌಹಾರ್ದತೆ, ಇತಿಹಾಸ, ಕಲೆ, ಸಂಗೀತ, ಸಾಧನೆ ಎಲ್ಲವನ್ನೂ ಅತ್ಯಪೂರ್ವವಾಗಿ, ಅದ್ಭುತವಾಗಿ ಒಗ್ಗಟ್ಟಾಗಿ ತೋರಿಸಿಕೊಟ್ಟದ್ದು ಎಂದೆಂದಿಗೂ ಮರೆಯಲಾಗದ, ಎಲ್ಲರಿಗೂ ಸ್ಫೂರ್ತಿದಾಯಕವಾದ ಕಾರ್ಯವಾಗಿದೆ. ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳು, ವಂದನೆಗಳು. ಒಗ್ಗಟ್ಟಿನಲ್ಲಿ ಬಲವಿದೆ, ಸಂತೋಷವಿದೆ, ಸೌಂದರ್ಯವಿದೆ.

ಚಿತ್ರಾವಳಿ

ಸಮುದಾಯ ಬೆಂಗಳೂರು , ಇಂಡಿಯನ್ ಪೀಪಲ್ಸ್ ಥಿಯೇಟರ್ ಅಶೋಷಿಯೇಶನ್ (ಇಪ್ಟಾ) , ರಾಗಿಕಣ ಸಂಯುಕ್ತ ಆಶ್ರಯದಲ್ಲಿ ಮತ್ತು ಗಾಂಧಿ ಸ್ಮಾರಕ ನಿಧಿ ಸಹ ಭಾಗಿತ್ವದಲಿ ನಡೆದ " ಪ್ರೀತಿ ಸಹ ಬಾಳ್ವೆಯ ಯಾತ್ರೆ – ರಾಷ್ಟ್ರೀಯ ಸಾಂಸ್ಕೃತಿಕ ಜಾಥಾ " ಉದ್ಘಾಟನಾ ಕಾರ್ಯಕ್ರಮ ಡಿಸೆಂಬರ್ 1 ರಂದು ಸಂಜೆ ಗಾಂಧಿ ಭವನದ ಆವರಣದಲ್ಲಿ ನಡೆಯಿತು . ನಂತರ ಡಿಸೆಂಬರ್ 2 ರಿಂದ 7 ರವರೆಗೆ ಮಂಗಳೂರಿನಿಂದ ಕಾಸರಗೋಡು ಗಡಿಭಾಗದ ಮಂಜೇಶ್ವರದವರೆಗೆ ಈ ಜಾಥಾದ ಪಾದಯಾತ್ರೆ ನಡೆಯಿತು. ಇದರ ಕೆಲವು ಚಿತ್ರಗಳು ಇಲ್ಲಿವೆ ..






SANJIVA RAO


MAHATMA GANDHI PEACE FOUNDATION
TAGORE PARK
MANGALORE


ಬಾಳ್ವೆಗಾಗಿ ನಮ್ಮ ನಡೆ
ಪ್ರೀತಿ ಸಹಬಾಳ್ವೆಗಾಗಿ ನಮ್ಮ













ಕರ್ನಾಟಕ ಗಾಂಧೀ ಸ್ಮಾರಕ ನಿಧಿ , ಎನ್ ಎಸ್ ಎಸ್ ರಾಜ್ಯಕೋಶ, ಗಾಂಧೀ ಸಂಶೋಧನಾ ಫೌಂಡೇಶನ್ ,ಜಲಗಾವ್ ಹಾಗೂ ಸರ್ಕಾರಿ ಪ್ರಥಮದರ್ಜೆ ಕಾಲೇಜು ಟಿ ದಾಸರಹಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಗಾಂಧೀ ಸಂಸ್ಕಾರ ಪರೀಕ್ಷೆಯ 6ನೆಯ ಘಟಿಕೋತ್ಸವವನ್ನು ಬೆಂಗಳೂರಿನ ಗಾಂಧೀ ಭವನದ ಮಹಾದೇವ ದೇಸಾಯಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58